ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper
ಸಂಪಾದಕರು: ರಮೇಶರೆಡ್ಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 345 | PAGE- ಪುಟ 8 | ಗುರುವಾರ 16.01.2025 ಬೀದರ | RNINO:KARKAN/2011/48371 | RS.ಬೆಲೆ 2/–

# ಪಾಲಿಕೆ ಆಯುಕ್ತರ
## ನಕಲಿ ಸಹಿ ವಂಚನೆ:ಐವರ ಸೆರೆ



ಮಲ್ಲಮ ನುಡಿ ವಾರ್ತೆ
ಕಲಬುರಗಿ:ಜ.15:ಮಹಾನಗರ ಪಾಲಿಕೆಯ ಆಯುಕ್ತರ ನಕಲಿ ಸಹಿ ಮಾಡಿ 36,56,640 ರೂ.ಗಳನ್ನು ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ನಗರ ಪೋಲಿಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ತಿಳಿಸಿದರು.

ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಆಯುಕ್ತರ ಆಪ್ತ ಸಹಾಯಕ ಮಿಲ್ಲತ್ ನಗರದ ಮಹಮ್ಮದ್ ನಯಿಮುದ್ದೀನ್ ಸರಗಿ, ಬಿಲಾಲಾಬಾದ್ ಕಾಲೋನಿಯ ವಾಜೀದ್ ಜಬ್ಬಾರ್, ಅಹ್ಮದ್ ಕಾಲೋನಿಯ ಮಿರ್ಜಾ ಆರಿಫ್ ಬೇಗ್, ಪಾಲಿಕೆಯಲ್ಲಿ ಅಕೌಂ-ಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಇಸ್ಲಾಮಾಬಾದ್ ಕಾಲೋನಿಯ ನಸೀರ್ ಅಹ್ಮದ್, ಪಾಲಿಕೆಯಲ್ಲಿ ಸೀನಿಯರ್ ಪ್ರೋಗ್ರಾಮರ್ ಆಗಿದ್ದ ಎಂಎಸ್‌ಕೆಮಿಲ್

(2ನೇ ಪುಟ ನೋಡಿ)



ಹುಮನಾಬಾದ: ಪ್ರಥಮ ಬಾರಿಗೆ ಶ್ರೀ ವೀರಭದ್ರೇಶ್ವರ ದೇವರ ಜೀವಂತ ಆನೆಯ ಮೇಲೆ ಮೆರವಣಿಗೆ ಬುಧುವಾರ ನಡೆಸಲಾಯಿತು.

## ಬಿಎಸ್‌ವೈ ಬಗ್ಗೆ ಮಾತಾಡುವಾಗ ನಾಲಿಗೆ ಮೇಲೆ ಹಿಡಿತವಿರಲಿ



ಮಲ್ಲಮ ನುಡಿ ವಾರ್ತೆ
ಕೊಪ್ಪಳ:ಜ.15:'ಯಡಿಯೂರಪ್ಪ ರಾಜ್ಯ ಕಂಡ ಅಪ್ರತಿಮ ಹೋರಾಟಗಾರ. ಅವರ ಬಗ್ಗೆ ರಮೇಶ್ ಜಾರಕಿಹೊಳಿ ಪತ್ರಿಕೆಗಳ ಮುಂದೆ ಹಗುರವಾಗಿ ಮಾತನಾಡುವುದು ಸರಿಯಲ್ಲ' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಮೇಶ್ ಜಾರಕಿಹೊಳಿ

(2ನೇ ಪುಟ ನೋಡಿ)






## ಒಂದನೇ ಪುಟದಿಂದ

## ಲಕ್ಷಾಂತರ ರೂ. ವಂಚನೆ:ಐವರ ಸೆರೆ

ನಿವಾಸಿ ಮೊಹಮ್ಮದ್ ಅಬ್ದುಲ್ ರೆಹಮಾನ್ ಅವರನ್ನು ಬಂಧಿಸಲಾಗಿದೆ ಎಂದರು.

ಬಂಧಿತ ಆರೋಪಿಗಳಿಂದ 30 ಲಕ್ಷದ 75 ಸಾವಿರ ರೂ.ಗಳ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಮಹಾನಗರ ಪಾಲಿಕೆಯ ಅಧೀಕ್ಷಕ ಅಭಿಯಂತರ ಹಾಗೂ ಪ್ರಭಾರಿ ಮುಖ್ಯ ಲೆಕ್ಕಾಧಿಕಾರಿ ಆರ್. ಪಿ. ಜಾಧವ್ ದೂರು ಆಧರಿಸಿ ಸಲ್ಲಿಸಿ ಕ್ರಮಕೈಗೊಳ್ಳಲಾಗಿದೆ. ಮಹಾನಗರ ಪಾಲಿಕೆಯ ಆಯುಕ್ತರ ಹೆಸರಿನಲ್ಲಿ ಇಂಡಿಯನ್ ಬ್ಯಾಂಕ್ ಸೂಪರ್ ಮಾರ್ಕೆಟ್ ಶಾಖೆಯಲ್ಲಿ ನಿರಂತರ ನೀರು ಸರಬರಾಜು ಯೋಜನೆಯಡಿ ನೀರು ಸರಬರಾಜು ಮಾಡಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಟ್ಟು 20 ಚೆಕ್‌ಗಳನ್ನು ಬಳಸಲಾಗಿದ್ದು, ಆ ಚೆಕ್‌ಗಳ ಮೇಲೆ ಆಯುಕ್ತರ ರುಜು ಮತ್ತು ಪಾಲಿಕೆಯ ಶೀಲ್ ಇದೆ. ಸದರಿ ಖಾತೆಯ ಮೂಲಕ ಡಿಡಿಗಳು ಮತ್ತು ಚೆಕ್‌ಗಳ ಮೇಲೆ ನಕಲಿ ಕೈ ಬರಹ ಮತ್ತು ರುಜು ಮಾಡಿ ಇಂಡಿಯನ್ ಬ್ಯಾಂಕಿನಿಂದ 36,56,640ರೂ.ಗಳನ್ನು ಪಡೆದುಕೊಂಡು ಮೋಸ, ವಂಚನೆ ಮಾಡಿದ್ದಾರೆ ಎಂದು ದೂರು ದಾಖಲಾಗಿತ್ತು ಎಂದರು.

ದಕ್ಷಿಣ ಉಪ ವಿಭಾಗದ ಸಹಾಯಕ ಪೋಲಿಸ್ ಆಯುಕ್ತ ಭೂತೇಗೌಡ ವಿ.ಎಸ್., ಅವರ ನೇತೃತ್ವದಲ್ಲಿ ಬ್ರಹ್ಮಪೂರ್ ಪೋಲಿಸ್ ಠಾಣೆಯ ಪಿಐ ಸೋಮಲಿಂಗ್ ಕಿರದಳ್ಳಿ, ಸಿಬ್ಬಂದಿಗಳಾದ ಶಿವಪ್ರಕಾಶ್, ಕೇಸುರಾಯ್, ವಿಶ್ವನಾಥ್, ರಾಮು ಪವಾರ್, ಶಶಿಕಾಂತ್, ಶಿವಶರಣಪ್ಪ, ನವೀನಕುಮಾರ್ ಅವರನ್ನು ಒಳಗೊಂಡ ತಂಡವು ಕಾರ್ಯಾಚರಣೆ ಕೈಗೊಂಡು ಐವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಉಪ ಪೋಲಿಸ್ ಆಯುಕ್ತರಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ನಾಯಕ್ ಉಪಸ್ಥಿತರಿದ್ದರು.ಪೊಲೀಸ ಸಿಬ್ಬಂದಿಗಳ ಕಾರ್ಯವನ್ನು ನಗರ ಪೊಲೀಸ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಶ್ಲಾಘಿಸಿದ್ದಾರೆ.

## ನಾಲಿಗೆ ಮೇಲೆ ಹಿಡಿತವಿರಲಿ

ಇತ್ತೀಚೆಗೆ ಪಕ್ಷಕ್ಕೆ ಬಂದವರು. ಯಡಿಯೂರಪ್ಪ ಬಗ್ಗೆ ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ನಾನು ಪಕ್ಷದ ರಾಜ್ಯದ ಅಧ್ಯಕ್ಷ ಇದ್ದೇನೆ. ಅವರ ಏನೇ ಸಮಸ್ಯೆ ಇದ್ದರೂ ದೆಹಲಿ ಮಟ್ಟದಲ್ಲಿ ಮಾತನಾಡಲಿ, ಅದನ್ನು ಬಿಟ್ಟು ಪತ್ರಿಕೆಗಳ ಮುಂದೆ ಮಾತನಾಡಬಾರದು. ಅದರಿಂದ ಅವರ ಲಕ್ಷಾಂತರ ಅಭಿಮಾನಿಗಳಿಗೆ ನೋವಾಗುತ್ತದೆ. ನಾನು ಒಂದೂವರೆ ವರ್ಷದಿಂದ ನಿರಂತರ ಹೋರಾಟ ಮಾಡಿದ್ದೇನೆ ಎಂದರು.

ರಾಜ್ಯದ ಮುಖ್ಯಮಂತ್ರಿ ತುದಿಗಾಲ ಮೇಲೆ ನಿಲ್ಲುವಂತೆ ಮಾಡಿದ್ದೇವೆ :ಮುಡಾ ನಿವೇಶನವನ್ನು ಸಿಎಂ ಮರಳಿ ನೀಡುವಂತೆ ಮಾಡಿದ್ದೇವೆ. ಈ ಮೂಲಕ ರಾಜ್ಯದ ಮುಖ್ಯಮಂತ್ರಿ ತುದಿಗಾಲ ಮೇಲೆ ನಿಲ್ಲುವಂತೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೋರಾಟಗಳನ್ನು ಹಮ್ಮಿಕೊಳ್ಳುವೆವು ಎಂದರು. ಎಲ್ಲರನ್ನು ಪಕ್ಷದ ಚಟುವಟಿಕೆಯಲ್ಲಿ ಕರೆದುಕೊಂಡು ಹೋಗುವುದು ನನ್ನ ಕರ್ತವ್ಯ, ಅದನ್ನು ಮಾಡುತ್ತಿದ್ದೇನೆ. ಅಲ್ಲೊಬ್ಬ–ಇಲ್ಲೊಬ್ಬರು ನನ್ನ ಬಗ್ಗೆ ವಿನಾಕಾರಣ ಮಾತನಾಡಿದರೇ ಉತ್ತರ ನೀಡಲು ನನಗೆ ಸಮಯ ಇಲ್ಲ. ಅವರಿಗೆ ಭಗವಂತ ಒಳ್ಳೆಯದನ್ನು ಮಾಡಲಿ ಅಂತ ಪ್ರಾರ್ಥನೆ ಮಾಡುತ್ತೇನೆ' ಎಂದರು.

ಸಿಎಂ ಸಿದ್ದರಾಮಯ್ಯನವರು ರಾಜಿನಾಮೆ ಕೊಡುವ ಸಂದರ್ಭ ಬಂದಿದೆ. ಇದನ್ನು ಹೇಳಿದರೆ ಸಿದ್ದರಾಮಯ್ಯ ಅವರು, ಭವಿಷ್ಯ ನುಡಿಯುತ್ತಿರಾ ? ಅಂತ ಕೇಳ್ತಾರೆ. ಆದರೆ, ನಮಗೆ ಸಿದ್ದರಾಮಯ್ಯ ಮೇಲೆ ದ್ವೇಷವಿಲ್ಲ. ನಾಡಿನ ಜನ ಭ್ರಷ್ಟ ಕಾಂಗ್ರೆಸ್ ಗೆ ಹಿಡಿಶಾಪ ಹಾಕುತ್ತಿದ್ದಾರೆ. ರಾಜ್ಯದಲ್ಲಿ ದರಿದ್ರ ಸರಕಾರ ಬಂದಿದೆ. ಆಡಳಿತ ಪಕ್ಷದ ಶಾಸಕರಿಗೂ ಕೂಡಾ ಇದೇ ಭಾವನೆ ಇದೆ. ಒಂದೇ ಒಂದು ರೂಪಾಯಿ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಸರಕಾರ ಬಂದ ಮೇಲೆ ಮೊನ್ನೆ ಹತ್ತು ಕೋಟಿ ಕೊಡುವುದಾಗಿ ಹೇಳಿದ್ದಾರೆ. ಅದು ಬಿಡುಗಡೆಯಾಗಿ ನಮ್ಮ ಕ್ಷೇತ್ರಕ್ಕೆ ಬರಲು ಎಷ್ಟು ತಿಂಗಳು ತೆಗೆದುಕೊಳ್ಳುತ್ತದೆಯೋ ಗೊತ್ತಿಲ್ಲ. ಹೀಗಾಗಿ ಪ್ರತಿಯೊಬ್ಬ ಶಾಸಕರಿಗೆ ತಮ್ಮ ಕ್ಷೇತ್ರದಲ್ಲಿ ಓಡಾಡಲು ಆಗದಂತಹ ಸ್ಥಿತಿಯಿದೆ' ಎಂದರು.

ರಾಜ್ಯದಲ್ಲಿರುವುದು ಹಿಂದುವಿರೋಧಿ ಸರಕಾರ:ರಾಜ್ಯದಲ್ಲಿರುವುದು ಹಿಂದು ವಿರೋಧಿ ಸರಕಾರವಿದೆ. ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕಡಿದಿದ್ದಾರೆ. ರಾಜ್ಯ ಸರಕಾರದ ಹಿಂದೂ ವಿರೋಧಿ ನೀತಿಯ ಪರಿಣಾಮವಿದು. ಆದರೆ, ಸಿಎಂ ಗಂಭೀರವಾಗಿ ಹೇಳಿಕೆ ನೀಡುವ ಕೆಲಸವಾಗಲಿಲ್ಲ. ಆಡಳಿತ ಪಕ್ಷದಲ್ಲಿ ನಾನು–ನಾನು ಅನ್ನೋದು ಆರಂಭವಾಗಿದೆ. ಸಿಎಂ ಸ್ಥಾನಕ್ಕೆ ಲಾಭಿ ಆರಂಭವಾಗಿದೆ. ಡಿಕೆಶಿ ಸೇರಿದಂತೆ ಅನೇಕರು ಸರದಿ ಸಾಲಿನಲ್ಲಿ ನಿಂತಿದ್ದಾರೆ. ಇದು ಜನಪರ ಸರಕಾರವಲ್ಲ, ಕಮಿಷನ್ ಸರಕಾರವಾಗಿದೆ' ಎಂದು ಕಿಡಿಕಾರಿದರು.

## ಬಡವರ ವೈದ್ಯ ಡಾ. ಪೂಜಾರಿ ಇನ್ನಿಲ್ಲ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಜ.15: ಬಡವರ ವೈದ್ಯ ಡಾ.ಪೂಜಾರಿ ಎಂದೆ ಪ್ರಖ್ಯಾತಿ ಯಾಗಿದ್ದ ಇಲ್ಲಿನ ಡಾ.ವೀರಪ್ಪ ಅಡಿವೆಪ್ಪ ಪೂಜಾರಿ ರವರು ಬುಧುವಾರ ನಿಧನರಾಗಿದ್ದಾರೆ.



ಇವರು ಮೂಲತ:ಬಸವಕಲ್ಯಾಣ ತಾಲ್ಲೂಕಿನ ಇಸ್ಲಾಂಪೂರ ಗ್ರಾಮದವರಾಗಿದ್ದು. ಬಡವರ ಸೇವೆಗಾಗಿ ಹುಮನಾಬಾದ್ ನಗರಕ್ಕೆ 1978 ರಲ್ಲಿಯೇ ಬಂದು, ಉತ್ತಮ ವೈದ್ಯಕೀಯ ಸೇವೆ ಸಲ್ಲಿಸಿದ್ದಾರೆ.ಹುಮನಾಬಾದನಲ್ಲಿಯೇ ಪ್ರಥಮ ಎಂಬಿಬಿಎಸ್ ವೈದ್ಯರು ಇವರಾಗಿದ್ದರು. ಸದಾ ಬಡವರ ಪರವಾಗಿದ್ದು,ಬಡವರಿಗೆ ಉತ್ತಮ ಚಿಕಿತ್ಸೆ ದೊರಕಲಿ ಎಂಬ ಉದ್ದೇಶದಿಂದ ಹುಮನಾಬಾದ್ ನಗರದಲ್ಲಿ ಕ್ಲಿನಿಕ್ ಆರಂಭಿಸಿದರು. ಸರ್ವರನ್ನು ಸಮಾನರಾಗಿ ಕಾಣುವ ವೈದ್ಯರಾಗಿದ್ದ ಇವರು ಬಡವರ ಪಾಲಿಗೆ ದೇವರಾಗಿ ಕಾರ್ಯನಿರ್ವಹಿಸಿದ್ದಾರೆ. ಬುಧುವಾರ ಇವರ ನಿಧನ ಸುದ್ದಿ ತಿಳಿದ ಸಾಕಷ್ಟು ಜನ ಬಡವರಿಗೆ ಆಘಾತವಾಗಿದೆ.

## ಬಡಿಗತನ, ದೋಬಿ ಸಲಕರಣೆಗಾಗಿ ಅರ್ಜಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ.ಜ.15:ಜಿಲ್ಲಾ ಉದ್ಯಮ ಕೇಂದ್ರವು ಪ್ರಸಕ್ತ ಸಾಲಿಗೆ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆಯಂತ್ರ ಹಾಗೂ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಗಳ ಸರಬರಾಜು ಯೋಜನೆಯಡಿ ಬಡಿಗತನ ಮತ್ತು ದೋಬಿ ಸಲಕರಣೆಗಳನ್ನು ಗ್ರಾಮೀಣ ಪ್ರದೇಶದ ಅರ್ಹ ಫಲಾನುಭವಿಗಳಿಗೆ ನೀಡಲು ಅರ್ಜಿ ಆಹ್ವಾನಿಸಾಗಿದೆ.

## ಜ.17, 18ರಂದು 5ನೇ ರಾಜ್ಯ ಹಣಕಾಸು ಆಯೋಗದ ಜಿಲ್ಲಾ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ.15 : 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು (ಸಂಪುಟ ದರ್ಜೆ ಸಚಿವರ ಸ್ಥಾನಮಾನ) ಮತ್ತು ಸದಸ್ಯರುಗಳು ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆ, ಕಾರ್ಯಚಟುವಟಿಕೆಗಳು, ಆರ್ಥಿಕ ಸ್ಥಿತಿ, ಸಂಪನ್ಮೂಲಗಳ ಕ್ರೋಢೀಕರಣ, ಹಂಚಿಕೆ ಮತ್ತು ಮೂಲ ಸೌಕರ್ಯ ಹಾಗೂ ಸೇವೆಗಳ ಒದಗಿಸುವಿಕೆಯಲ್ಲಿ ತಾಂತ್ರಿಕ ಕೌಶಲ್ಯ, ಸಾಮರ್ಥ್ಯ ಇತ್ಯಾದಿಗಳನ್ನು ಅಧ್ಯಯನ ಮಾಡುತ್ತಿರುವುದರಿಂದ ಜನವರಿ. 17 ಮತ್ತು 18 ರಂದು ಬೀದರ ಜಿಲ್ಲೆಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ ಎಂದು 5ನೇ ರಾಜ್ಯ ಹಣಕಾಸು ಆಯೋಗದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಪ್ರವಾಸ ಕಾರ್ಯಕ್ರಮ ವಿವರ: ಅವರು ಜನವರಿ.17 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಬೀದರ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಬೀದರ ಜಿಲ್ಲೆಯ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ. (ಬೆಳಿಗ್ಗೆ 10.30 ರಿಂದ 12 ರವರೆಗೆ ಅಧಿಕಾರಿಗಳಿಂದ ವಿಷಯ ಮಂಡನೆ (ಪಿಪಿಟಿ ಮೂಲಕ), ಮಧ್ಯಾಹ್ನ 12 ರಿಂದ 1.30 ರವರೆಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಚರ್ಚೆ). ನಂತರ ಮಧ್ಯಾಹ್ನ 3 ರಿಂದ 5 ಗಂಟೆಯವರೆಗೆ ಬೀದರ ನಗರಸಭೆ ಭೇಟಿ ನೀಡಿ ಚುನಾಯಿತಿ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಿದ್ದಾರೆ.

ಜನವರಿ.18 ರಂದು ಬೆಳಿಗ್ಗೆ 10 ರಿಂದ 12 ರವರೆಗೆ ಭಾಲ್ಕಿ ಪುರಸಭೆಗೆ ಭೇಟಿನೀಡಿ ಅಲ್ಲಿನ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಲ ಜೊತೆ ಚರ್ಚೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 12 ರಿಂದ 1.30 ರವರೆಗೆ ಭಾಲ್ಕಿ ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತ ಭೇಟಿ (ಬೀದರ್ ಮಾರ್ಗ ಮಧ್ಯ) ನೀಡಿ ಅಲ್ಲಿನ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 3 ರಿಂದ 4.30 ರವರೆಗೆ ಬೀದರ ಜಿಲ್ಲಾ ಪಂಚಾಯತಿಗೆ ಭೇಟಿ ನೀಡಿ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಿದ್ದಾರೆಂದು ಅವರು ತಿಳಿಸಿದ್ದಾರೆ.

## ಸುರಪುರ, ಹಾಗೂ ಹುಣಸಗಿ ವರದಿಗಾರರ ನೇಮಕ





ಮಲ್ಲಮ್ಮ ನುಡಿ ವಾರ್ತೆ

ಬೀದರ್.ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿ–ಕೆಯ, ಯಾದಗಿರಿ ಜಿಲ್ಲೆಯ ಸುರಪುರ,ಹಾಗೂ ಹುಣಸಗಿ. ಕೇಂಬಾವಿ ವರದಿಗಾರರನ್ನು ನೇಮಿಸಲಾಗಿದೆ.ಸುರಪುರ ವರದಿಗಾರರಾಗಿ ವೀರೇಶ ಟಕ್ಕಳಕಿ, ಹುಣಸಗಿ.ಕೇಂಬಾವಿ ಶಿವುರಾಠೋಡ. ಇವರಿಬ್ಬರನ್ನು ನೇಮಿಸಲಾಗಿದೆ ಎಂದು ಸಂಪಾದಕ ರಮೇಶರಡ್ಡಿ ತಿಳಿಸಿದ್ದಾರೆ.

## ಹೆತ್ತವರನ್ನು ಪ್ರೀತಿಯಿಂದ ಕಾಣುವುದೇ ಪೂಜನೀಯ ಕಾರ್ಯ:ಸಚಿವ ತಿಮ್ಮಾಪೂರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.15:ವಿದ್ಯೆ ಕೊಡಿಸಿ ನಿಮಗೊಂದು ನೆಲೆ ಕಲ್ಪಿಸಿ ಬದುಕು ಕಟ್ಟಿಕೊಡುವ ಹೆತ್ತವರನ್ನು ಎಂದಿಗೂ ಕಡೆಗಣಿಸಬೇಡಿ. ಅವರನ್ನು ಪ್ರೀತಿ,ಗೌರವದಿಂದ ಆರಾಧಿಸುವ ಮಕ್ಕಳು ನೀವಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.



ಸಮೀಪದ ಭಗವತಿ ಗ್ರಾಮದಲ್ಲಿ ಮಂಗಳವಾರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು,ನಮ್ಮ ಮಕ್ಕಳು ಚನ್ನಾಗಿ ಓದಿ, ದೊಡ್ಡ ಹುದ್ದೆಗಳಲ್ಲಿ ನೌಕರಿ ಮಾಡಬೇಕು ಎಂಬ ಹಂಬಲ ಹೊತ್ತು ಬದುಕಿರುವ ತಂದೆ–ತಾಯಿಗಳ ಮನಸ್ಸನ್ನು ಯಾವತ್ತಿಗೂ ನೋಯಿಸಬೇಡಿ ಎಂದರು.

ಹಲವಾರು ಕಷ್ಟಗಳ ಮಧ್ಯೆಯೂ ನಿಮ್ಮನ್ನು ಬೆಳೆಸಿ, ಓದಿಸಿ ನಿಮ್ಮ ಭವಿಷ್ಯ ರೂಪಿಸುವ ತಂದೆ–ತಾಯಿಗಳನ್ನು ನೀವು ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಕಡೆಗಣಿಸಬೇಡಿ. ಅವರನ್ನು ಸದಾ ಗೌರವಿಸುವಂತಹ ಮಕ್ಕಳಾಗಿ ಬೆಳೆಯಬೇಕು ಎಂದು ಸಚಿವ ಆರ್.ಬಿ.ತಿಮ್ಮಾಪೂರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಓದುವ ಮಕ್ಕಳೂ ಸಾಧಕರಾಗಿ ಹೊರ ಹೊಮ್ಮಿರುವ ಅನೇಕ ಉದಾಹರಣೆಗಳಿವೆ. ಹೀಗಾಗಿ ಗ್ರಾಮೀಣ ಸರ್ಕಾರಿ ಶಾಲೆಗಳ ಬಗ್ಗೆ ಯಾರಿಗೂ ತಾತ್ಸಾರ ಭಾವನೆ ಇರಕೂಡದು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ವಾಯ್.ಮೇಟಿ, ಪ್ರತಿಯೊಬ್ಬ ವ್ಯಕ್ತಿಯ ಸಾಧಕ ಬದುಕಿಗೆ ಶಿಕ್ಷಣ ಅಗತ್ಯವಾಗಿದೆ. ಶಿಕ್ಷಣವಂತರಾದರೆ ಯಾವುದೇ ಕೆಲಸದಲ್ಲೂ ಪ್ರಗತಿ ಸಾಧಿಸಲು ಸಾಧ್ಯ ಎಂದು ಹೇಳಿದರು.

ಗ್ರಾಪಂ ಅಧ್ಯಕ್ಷ ಶಿವಪುತ್ರಪ್ಪ ದೊಡಮನಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಚನ್ನಬಸಪ್ಪ ಹಳ್ಳೂರ, ಸದಸ್ಯರು, ಜಿಪಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್.ಎಂ.ರೇವಡಿ, ಪ್ರಾಚಾರ್ಯ ಬಿ.ವಾಯ್.ಕೆಳಗಿನಮನಿ, ಪಿಕೆಪಿಎಸ್ ಅಧ್ಯಕ್ಷ ಕಲ್ಲು ಹಳ್ಳೂರ, ಪಿ.ಎಲ್.ಡಿ ಬ್ಯಾಂಕ್ ಸದಸ್ಯ ಮಹಾಂತೇಶ ಜನಗೌಡ್ರ, ಭೀಮಶಿ ಯಡಹಳ್ಳಿ, ಎಸ್.ಎನ್.ರಾಂಪುರ, ದ್ಯಾಮಣ್ಣ ಗಾಳಿ, ಶಂಭುಗೌಡ ಪಾಟೀಲ, ವೇಮನ ಯಡಹಳ್ಳಿ, ಶಿವಪ್ಪ ಪಾಟೀಲ, ಸಿ.ಬಿ.ಕಲ್ಲೋಲ, ಗುತ್ತಿಗೆದಾರ ಇಕ್ಬಾಲ್ ಮುಗಳೊಳ್ಳಿ, ಬಿ.ಜಿ.ಸುನಗದ, ಬಿ.ಎಸ್.ಕಲ್ಲೋಲ, ವಸಂತ ಗೌಡರ, ಶ್ರೀಶೈಲ್ ದೊಡಮನಿ, ಶಿವಯ್ಯ ಹಿರೇಮಠ, ಶೇಖರಪ್ಪ ನಾಯಕ ಮತ್ತಿತರರು ವೇದಿಕೆಯಲ್ಲಿದ್ದರು.

ಪ್ರೊ.ವ್ಹಿ.ಎಚ್.ತುರಡಗಿ ಸ್ವಾಗತಿಸಿದರು. ಪ್ರೊ.ವ್ಹಿ.ಆರ್. ಹೆರಕಲ್ ನಿರೂಪಿಸಿದರು. ಪ್ರೊ.ಅಕ್ಕಮ್ಮ ವಂದಿಸಿದರು. ಪ್ರೊ.ಎಸ್.ಡಿ.ಪಾಟೀಲ, ಎಸ್.ಐ.ನದಾಫ ಇದ್ದರು.

## ವಿ.ಎನ್. ಅಪ್ಪೆ ಫೌಂಡೇಶನ್ ವತಿಯಿಂದ ಹೆಲ್ಮೆಟ್ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 15 : ನಗರದ ಅಂಬೇಡ್ಕರ ವೃತ್ತದ ಹತ್ತಿರ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ವಿ.ಎನ್. ಅಪ್ಪೆ ಫೌಂಡೇಶನ್ ಅಧ್ಯಕ್ಷರಾದ ವಿನೋದ ಅಪ್ಪೆ ಅವರ ನೇತೃದಲ್ಲಿ ಅರಣ್ಯ, ಪರಿಸರ, ಜೀವಿ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರ 62ನೇ ವರ್ಷದ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸಿ ಕಾರ್ಯಕ್ರಮ ಆಚರಿಸಲಾಯಿತು. ಸಚಿವರ ಹುಟ್ಟು ಹಬ್ಬದ ನಿಮಿತ್ಯ ಒಟ್ಟು 251 ವಾಹನ ಚಾಲಕರಿಗೆ ಹೆಲ್ಮೆಟ್ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಪೋಲಿಸ್ ವರಿಷ್ಠಾಧಿಕಾರಿಗಳು ಗುಂಟೆ ಚಾಲನೆ ನೀಡಿಲಾಯಿತು.

ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರಾದ ಮನ್ನಾನ್ ಸೇಠ, ಸಿ.ಎಂ.ಸಿ. ಅಧ್ಯಕ್ಷರಾದ ಗೌಸೊದ್ದೀನ್, ಯುಸುಫ್ ಪಹಲ್ವಾನ್, ರಿಯಾಜ್, ಹಣಮಂತ ಮಲ್ಕಾಪೂರೆ, ಸೂರ್ಯಕಾಂತ ಸಾದುರೆ, ಪವನ ಮಿಠಾರೆ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶಿವರಾಜ ಹಾಸನಕರ್, ಗೌತಮ ಮುತ್ತಂಗಿಕರ ಇನ್ನಿತರರು ಉಪಸ್ಥಿತರಿದ್ದರು.

## ಪತ್ರಕರ್ತ ಅಪ್ಪಾರಾವ ಸೌದಿಗೆ ರಾಜ್ಯ ಪ್ರಶಸ್ತಿ: ಹರ್ಷ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 15 : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕವು ಈ ತಿಂಗಳ 18 ಹಾಗೂ 19ರಂದು ನಾಡಿನ ಕಲ್ಪತರು ನಾಡೆಂದೇ ಖ್ಯಾತಿ ಗಳಿಸಿದ ತುಮಕುರಿನಲ್ಲಿ ನಡೆಯಲಿರುವ ಪತ್ರಕರ್ತರ 39ನೇ ರಾಜ್ಯ ಸಮ್ಮೇಳನದಲ್ಲಿ ಕೊಡಮಾಡುವ ಖಾದ್ರಿ ಶಾಮಣ್ಣ(ಅತ್ಯುತ್ತಮ ರಾಜಕೀಯ ವಿಮರ್ಶಾತ್ಮಕ ವರದಿಗೆ) ಪ್ರಶಸ್ತಿಗೆ ಭಾಜನರಾದ ಕನ್ನಡಪ್ರಭ ದಿನಪತ್ರಿಕೆಯ ಕಲಬುರಗಿ ಅವೃತ್ತಿಯ ಮುಖ್ಯಸ್ಥರಾದ ಅಪ್ಪಾರಾವ ಸೌದಿ ಅವರನ್ನು ಆಯ್ಕೆ ಮಾಡಿದಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ಹರ್ಷ ವ್ಯಕ್ತಪಡಿಸಿದೆ.ಈಕುರಿತು ಪ್ರಕಟಣೆ ಹೊರಡಿಸಿರುವ ಸಂಘವು ನಾಡಿನ ಮೂಕುಟಪ್ರಾಯ ಗಡಿ ಜಿಲ್ಲೆ ಬೀದರ್ ಗೆ ಈ



ವರ್ಷ ಒಂದು ಪ್ರಶಸ್ತಿ ನೀಡಿ ನಮ್ಮ ಜಿಲ್ಲೆಗೆ ಮನ್ನಣೆ ನೀಡಿದಕ್ಕೆ ಜಿಲ್ಲಾ ಘಟಕವು ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ ಲೋಕೇಶ ಸೇರಿದಂತೆ ರಾಜ್ಯ ಘಟಕದ ಎಲ್ಲ ಪದಾಧಿಕಾರಿಗಳಿಗೆ ಹಾಗೂ ಆಯ್ಕೆ ಸಮಿತಿಗೆ ಕೃತಜ್ಞತೆ ಸಲ್ಲಿಸುವುದಾಗಿ ಸಂಘ ತಿಳಿಸಿದೆ.

ಹರ್ಷ: ಪತ್ರಕರ್ತ ಅಪ್ಪಾರಾವ ಸೌದಿ ಅವರು ರಾಜ್ಯ ಪ್ರಶಸ್ತಿಗೆ ಆಯ್ಕೆ ಆಗಿದ್ದಕ್ಕೆ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಕೆ ಗಣಪತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಜಿಲ್ಲಾ ಉಪಾಧ್ಯಕ್ಷರಾದ ಶ್ರೀನಿವಾಸ ಚೌದ್ರಿ, ಅಬ್ದುಲ್ ಅಲಿ, ನಾಗಶೆಟ್ಟಿ ಧರಂಪುರ, ಜಿಲ್ಲಾ ಕಾರ್ಯದರ್ಶಿ ಪ್ರಥ್ವಿರಾಜ, ಸುನಿಲಕುಮಾರ ಕುಲಕರ್ಣಿ, ಶ್ರೀಕಾಂತ ಬಿರಾದಾರ, ಖಜಾಂಚಿ ಎಂ.ಪಿ.ಮುದಾಳೆ, ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಬಸವರಾಜ ಕಾಮಶೆಟ್ಟಿ, ಭಾರತೀಯ ಕಾರ್ಯನಿರತ ಪರ್ತಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯ ದೀಪಕ ಮನ್ನಳ್ಳಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯರು, ಎಲ್ಲ ತಾಲೂಕುಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಇತರೆ ಪದಾಧಿಕಾರಿಗಳು ಮತ್ತು ಸಂಘದ ಸರ್ವ ಸದಸ್ಯರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

## ದಾಡಗಿಕ್ರಾಸ್, ಬಸವಣ್ಣನವರ ಪ್ರತಿಮೆ ವಿರೂಪ: ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.15: ತಾಲೂಕಿನ ದಾಡಗಿ ಕ್ರಾಸ್ ಹತ್ತಿರದ ಬಸವಣ್ಣನವರ ಪ್ರತಿಮೆ ವಿರೂಪಗೊಳಿಸಿದ್ದನ್ನು ಖಂಡಿಸಿ ಬುಧವಾರ ಗ್ರಾಮಸ್ಥರು ಹಾಗು ಬಸವ ಭಕ್ತರು ರಸ್ತೆ ತಡೆನಡೆಸಿ ಪ್ರತಿಭಟಿಸಿದರು.



ಮಂಗಳವಾರ ಮಧ್ಯರಾತ್ರಿಯೇ ತಾಲೂಕಿನ ದಾಡಗಿ ಕ್ರಾಸ್ ಹತ್ತಿರ ಸ್ಥಾಪಿಸಿರುವ ಬಸವಣ್ಣನವರ ಪ್ರತಿಮೆಗೆ ಕಿಡಿಗೇಡಿಗಳು ವಿರೂಪ ಗೊಳಿಸಿದ್ದಾರೆ ಎಂದು ಬುಧವಾರ ದಾಡಗಿ ಗ್ರಾಮಸ್ಥರು ಮತ್ತು ತಾಲೂಕಿನ ಬಸವ ಭಕ್ಕರು ಸೇರಿಕೊಂಡು, ಹುಮನಾಬಾದ–ಭಾಲ್ಕಿ–ಬಸವಕಲ್ಯಾಣ ಮಾರ್ಗದ ರಸ್ತೆಯನ್ನು ತಡೆಗಟ್ಟಿ, ಟೈರ್‌ಗೆ ಬೆಂಕಿ ಹಚ್ಚುವ ಮೂಲಕ ಪ್ರತಿಭಟನೆ ನಡೆಸಿದರು. ಬಸವಣ್ಣನವರ ಪ್ರತಿಮೆಯ ಕೈಗಳನ್ನು ಕತ್ತರಿಸಿ, ಷಟಸ್ಥಲ ಧ್ವಜಾರೋಹಣ ಬೀಳಿಸಿದ್ದನ್ನು ನೋಡಿದ ಗ್ರಾಮಸ್ಥರು ಪ್ರತಿಭಟನೆಗೆ ಇಳಿದರು. ಇವರೊಂದಿಗೆ ತಾಲೂಕಿನ ಬಸವಭಕ್ತರು ಕೈಜೋಡಿಸಿದರು. ಪರಿಸ್ಥಿತಿ ತಿಳಿದ ಭಾಲ್ಕಿ ಉಪವಿಭಾಗದ ಡಿವಾಯ್‌ಎಸ್‌ಪಿ ಶಿವಾನಂದ ಪವಾಡಶೆಟ್ಟಿ ಮತ್ತು ಖಟಕಚಿಂಚೋಳಿ ಪೊಲೀಸರು ಸ್ಥಳಕ್ಕೆ ಧಾವಿಸಿ ಪ್ರತಿಭಟನೆ ನಿಲ್ಲಿಸಲು ಪ್ರಯತ್ನಿಸಿದರು. ಪ್ರತಿಭಟನಕಾಕಾವು ಏರುತ್ತಿದ್ದಂತೆ ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ ಯವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಪ್ರತಿಭಟನೆಯಲ್ಲಿ ಬಸವಭಕ್ತರಾದ ಕಿರಣಕುಮಾರ ಖಂಡ್ರೆ, ನಾಗಶೆಟ್ಟಿ ಚೋಳಾ, ವಿಲಾಸ ಪಾಟೀಲ, ನ್ಯಾಯವಾದಿ ಸಿದ್ದು ಪಾಟೀಲ, ಅಶೋಕ ಪಾಂಚಾಳ, ಬಸವರಾಜ ಹುಡಗೆ, ಬಸವರಾಜ ಮಾಕಾ, ಆನಂದ, ಕಲ್ಯಾಣರಾವ ಕುಂಬಾರಗೆರೆ, ನಂದಕುಮಾರ, ಜೀತು ಪಾಟೀಲ, ಕಿಶೋರ, ಮಹೇಶ ಧುಳೆ ಸೇರಿದಂತೆ ನೂರಾರು ಸಂಖೆಯಲ್ಲಿ ದಾಡಗಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಖಂಡನೆ: ಬಸವಣ್ಣನವರ ಪ್ರತಿಮೆಯನ್ನು ವಿರೂಪ ಗೊಳಿಸಿದ್ದನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಂಭುಲಿಂಗ ಕಾಮಣ್ಣ, ರೈತ ಮುಖಂಡರಾದ ನಾಗಶೆಟ್ಟೆಪ್ಪ ಲಂಜವಾಡೆ, ಕಾಶಿನಾಥ ಭೂ–ರೆ, ವಿಠಲರಾವ ಬಿರಾದಾರ, ಹಿರೇಮಠ ಸಂಸ್ಥಾನ ಚಿಂತನಾ ವೇದಿಕೆಯ ವಿಶ್ವನಾಥಪ್ಪ ಬಿರಾದಾರ, ಶರಣಪ್ಪ ಬಿರಾದಾರ ತೀವ್ರವಾಗಿ ಖಂಡಿಸಿದ್ದಾರೆ.

## ಕಲಬುರಗಿಯಲ್ಲಿ "ಸಖಿ ಒನ್ ಸ್ಟಾಫ್ ಸೆಂಟರ್" ಉಚಿತ ಮಹಿಳಾ ಸಹಾಯವಾಣಿ 181 ಪ್ರಾರಂಭ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.15-ಕೇಂದ್ರ ಸರ್ಕಾರದಿಂದ ಜಾರಿಯಾದ "ಸಖಿ ಒನ್ ಸ್ಟಾಪ್ ಸೆಂಟರ್"ನ್ನು ಕಲಬುರಗಿ ನಗರದ ಪ್ರಗತಿ ಕಾಲೋನಿಯಲ್ಲಿರುವ ಬಾಲಕರ ಬಾಲಮಂದಿರದ ಆವರಣದಲ್ಲಿ ಪ್ರಾರಂಭಿಸಲಾಗಿದ್ದು, ಈ "ಸಖಿ ಒನ್ ಸ್ಟಾಫ್ ಸೆಂಟರ್"ನ ಉಚಿತ ಮಹಿಳಾ ಸಹಾಯವಾಣಿ 181 ಅಡಿಯಲ್ಲಿ ಈ ಕೆಳಕಂಡ ಪ್ರಕರಣಗಳಿಗೆ ಸಹಾಯ ಪಡೆಯಬಹುದಾಗಿದೆ ಎಂದು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಈ ಸಖಿ ಒನ್ ಸ್ಟಾಫ್ ಸೆಂಟರ್‌ವು ದಿನದ 24 ಗಂಟೆ ಹಾಗೂ ವರ್ಷದ 365 ದಿನವೂ ಕಾರ್ಯನಿರ್ವಹಿಸುತ್ತಿದೆ. ಈ ಸಖಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ಲೈಂಗಿಕ ಕಿರುಕುಳ, ಅತ್ಯಾಚಾರ, ಬಾಲ್ಯವಿವಾಹ, ವರದಕ್ಷಣೆ ಕಿರುಕುಳ, ದೈಹಿಕ ಹಿಂಸೆ, ಕೌಟುಂಬಿಕ ಹಿಂಸೆ, ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ, ಅಪಹರಣ, ಸೈಬರ್ ಅಪರಾಧ, ಲೈಂಗಿಕ ದುರುಪಯೋಗ ಹಾಗೂ ಇತರೆ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದಾಗಿದೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ತುರ್ತು ಸೇವೆಗಳಾದ ಉಚಿತ ವೈದ್ಯಕೀಯ ನೆರವು, ಆಪ್ತ ಸಮಾಲೋಚನೆಯ ನೆರವು, ಪೊಲೀಸ್ ನೆರವು ಹಾಗೂ ತಾತ್ಕಾಲಿಕ ಸುರಕ್ಷತೆಯ ವಸತಿ ನೆರವು ಕಲ್ಪಿಸಲಾಗುತ್ತದೆ. ಇಲಾಖೆಯ ಸಹಭಾಗಿತ್ವದೊಂದಿಗೆ ಬಾಲಕಿ ಮತ್ತು ಮಹಿಳೆಯರನ್ನು ಕುಟುಂಬದೊಂದಿಗೆ ಸೇರ್ಪಡೆ ಮಾಡಲು, ಕುಟುಂಬದೊಂದಿಗೆ ಪುನರ್‌ಸ್ಥಾಪನೆಗೊಂಡ ಫಲಾನುಭವಿ, ಸದರಿ ಕುಟುಂಬದೊಂದಿಗೆ ಅನುಸರಣೆಯ ಮೂಲಕ ಸುರಕ್ಷತೆಯನ್ನು ಖಾತ್ರಿಪಡಿಸುವುದು ಹಾಗೂ ಅನುಪಾಲನೆಯೊಂದಿಗೆ ಕುಟುಂಬಗಳಿಗೆ ಭೇಟಿ ನೀಡಿ, ಕುಟುಂಬಸ್ಥರೆಲ್ಲರೂ ನಡುವೆ ಉತ್ತಮವಾದ ಬಾಂಧವ್ಯಕ್ಕೆ ಅನುವು ಮಾಡಿಕೊಡುವುದು ಸಖಿ ಒನ್ ಸ್ಟಾಫ್ ಸೆಂಟರ್‌ನ ಉದ್ದೇಶವಾಗಿದೆ.

## ಜನವರಿ 19 ರಂದು ಶ್ರೀ ಮಹಾಯೋಗಿ ವೇಮನ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.15-ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಮಹಾಯೋಗಿ ವೇಮನ ಜಯಂತಿ ಆಚರಣೆ ಕಾರ್ಯಕ್ರಮವನ್ನು ಜನವರಿ 19ರಂದು ರವಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್, ಅಫಜಲಪುರ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾದ ಎಂ.ವೈ. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಹಾಗೂ ಆಳಂದ ಶಾಸಕ ಹಾಗೂ ಮುಖ್ಯಮಂತ್ರಿಯವರ ಸಲಹೆಗಾರ (ನೀತಿ ಮತ್ತು ಕಾರ್ಯಕ್ರಮ) ರಾದ ಬಿ.ಆರ್. ಪಾಟೀಲ ಅವರು ಗೌರವ ಉಪಸ್ಥಿತಿ ವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

## ಚಿತ್ತಾಪುರ ಪುರಸಭೆ: ಡೇ-ನಲ್ಮ್ ಯೋಜನೆಯಡಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.15- ಚಿತ್ತಾಪುರ ಪುರಸಭೆ ವತಿಯಿಂದ 2024-25ನೇ ಸಾಲಿನಲ್ಲಿ ಡೇ-ನಲ್ಮ್ ಯೋಜನೆಯಡಿ ಚಿತ್ತಾಪೂರ ಪಟ್ಟಣದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ನಿರುದ್ಯೋಗಿ ಅರ್ಹ ಫಲಾನುಭವಿಗಳಿಂದ ವೈಯಕ್ತಿಕ ಹಾಗೂ ಗುಂಪು ಉದ್ಯೋಗಕ್ಕಾಗಿ ಈಗಾಗಲೇ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ನಿಗದಿಪಡಿಸಿದ ಗುರಿಯಂತೆ ಅರ್ಹ ಫಲಾನುಭವಿಗಳಿಂದ ಅರ್ಜಿಗಳು ಬಾರದೇ ಇರುವ ಹಿನ್ನೆಲೆಯಲ್ಲಿ ಪುನ: ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಚಿತ್ತಾಪುರ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ವೈಯಕ್ತಿಕ ಉದ್ಯೋಗ ಪ್ರಾರಂಭಿಸಲು ಸಾಲ ಮತ್ತು ಬಡ್ಡಿ ಸಹಾಯಧನ, ಗುಂಪು ಉದ್ಯೋಗ ಪ್ರಾರಂಭಿಸಲು ಸಾಲ ಮತ್ತು ಬಡ್ಡಿ ಸಹಾಯಧನ ಹಾಗೂ ಬ್ಯಾಂಕ್ ಲಿಂಕೇಜ್‌ನಲ್ಲಿ ಸಾಲ ಮತ್ತು ಬಡ್ಡಿ ಸಹಾಯಧನ ಯೋಜನೆಯಡಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿದಾರರ ಚಿತ್ತಾಪೂರ ನಗರದ ಖಾಯಂ ನಿವಾಸಿಯಾಗಿಬೇಕು. ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ವರ್ಷ ರಿಂದ 40 ವರ್ಷದೊಳಗಿರಬೇಕು. ವಾರ್ಷಿಕ ವರಮಾನ 2,00,000 ರೂ. ಮೀರಿರಬಾರದು. ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು.

ಅರ್ಹ ಫಲಾನುಭವಿಗಳು ಚಿತ್ತಾಪುರ ಪುರಸಭೆ ಕಚೇರಿಯಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಎಲ್ಲಾ ದೃಢೀಕೃತ ಪ್ರಮಾಣಪತ್ರಗಳೊಂದಿಗೆ ದ್ವಿಪ್ರತಿಯಲ್ಲಿ ಅರ್ಜಿಯನ್ನು 2025ರ ಜನವರಿ 31 ರ ಸಂಜೆ 5 ಗಂಟೆಯೊಳಗಾಗಿ ಚಿತ್ತಾಪುರ ಪುರಸಭೆ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಚಿತ್ತಾಪುರ ಪುರಸಭೆಯ ಕಚೇರಿಯಲ್ಲಿನ ನಗರ ಬಡತನ ನಿರ್ಮೂಲನ ಕೋಶ ವಿಭಾಗದಲ್ಲಿ ಕಛೇರಿಯ ವೇಳೆಯಲ್ಲಿ ರಜೆಯ ದಿನವನ್ನು ಹೊರತುಪಡಿಸಿ ಚಿತ್ತಾಪುರ ಪುರಸಭೆ ಕಚೇರಿಯಿಂದ ಮತ್ತು ಪುರಸಭೆಯ ವೆಬ್‌ಸೈಟ್‌ಗೆ ಸಂಪರ್ಕಿಸಿ ಪಡೆಯಲು ಕೋರಲಾಗಿದೆ.

## ಇಂದು ಆರ್ಬಿಟ್ ಸಂಸ್ಥೆಯ 30ನೇ ವರ್ಷದ ಜುಬಿಲಿ ಮಹೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಜ.15-ಆರ್ಬಿಟ್ ಸಮಾಜ ಸೇವೆ ಸಂಸ್ಥೆಯು 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದೆ, ಹಾಗೂ ಇದರ ಸಂಭ್ರಮಾಚರಣೆಯನ್ನು ಗುರುವಾರ, ದಿನಾಂಕ 16, ಜನವರಿ 2025ಕ್ಕೆ ಸಮಾಜದ ಉದ್ಧಾರಕ್ಕಾಗಿ ಹಾಗೂ ಪಟ್ಟ ಕಷ್ಟಗಳನ್ನು, ಮಾಡಿದ ತ್ಯಾಗಗಳನ್ನು, ಮಾಡಿದ ಸಾಧನೆಗಳನ್ನು ನಿಮ್ಮ ಜೊತೆ ಹಂಚಿಕೊಳ್ಳಲು ಕಾರ್ಯಕ್ರಮವನ್ನು ಹುಮನಾಬಾದ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ.ವಿಕ್ಟರ್ ಅನಿಲ್ ವಾಸ್ ರವರು ಪತ್ರಿಕೆಗೆ ತಿಳಿಸಿದ್ದಾರೆ. ಈ ಕಾರ್ಯಕ್ರಮದ ಧರ್ಮಾಧ್ಯಕ್ಷರು, ಗುಲ್ಬರ್ಗಾ ಧರ್ಮ ಕ್ಷೇತ್ರದ ಪೂಜ್ಯ ಡಾ.ರಾಬರ್ಟ್ ಮಿರಂದಾ- ಸಾನಿಧ್ಯವನ್ನು ಹಾಗೂ ಅಧ್ಯಕ್ಷತೆ ವಹಿಸುವರು. ಸಾನಿಧ್ಯವನ್ನು ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ರೇಣುಕ ಗಂಗಾಧರ ಶಿವಚಾರ್ಯ ಮಾಹಾಸ್ವಾಮಿಗಳು, ಬೀದರ ಜಮತೆ ಉಲ್ಮಾ ನದವೆ ಅಧ್ಯಕ್ಷರಾದ ಮೌಲಾನ ತಸ್ಸದ್ದುಗ್ ಶಾಬ್, ಗುಲ್ಬರ್ಗಾ ಧರ್ಮ ಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾ.ಸ್ಟ್ಯಾನಿ ಲೋಬೊ, ಬೀದರ ವಲಯದ ಮುಖ್ಯಗುರುಗಳಾದ ಫಾ.ಕ್ಲಾರಿ ಡಿಸೋಜಾ ವಹಿಸುವರು. ಹುಮನಾಬಾದ ಶಾಸಕ ಸಿದ್ದಲಿಂಗಪ್ಪಾ ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಬಿ.ಪಾಟೀಲ, ಭೀಮರಾವ ಪಾಟೀಲ್, ಮಾಜಿ ಸಚಿವರಾದ ರಾಜಶೇಖರ ಬಿ.ಪಾಟೀಲ, ಕರ್ನಾಟಕ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತರಾದ ದಾಸ್ ಸೂರ್ಯವಂಶಿ, ಆಗಮಿಸುವರು. ಅತಿಥಿಗಳಾಗಿ ಹುಮನಾಬಾದ ತಾಲೂಕಾ ದಂಡಾಧಿಕಾರಿಗಳಾದ ಸಂಜುಮ್ ತಬಸ್ಸುಮ್, ಹುಲಸೂರ ತಾಲೂಕಾ ದಂಡಾಧಿಕಾರಿ ಶಿವಾನಂದ ಮೇತ್ರೆ, ಬೀದರ ತಾಲೂಕಾ ಆರೋಗ್ಯಾಧಿಕಾರಿ ಡಾ. ಧಾನ್ಯಶ್ವರ್ ನಿರಗುಡಿ, ಹುಮನಮಾಬಾದ ಪುರಸಭೆ ಅಧ್ಯಕ್ಷೆ ಪಾರ್ವತಮ ಶೇರಿಕಾರ, ಹುಮನಾಬಾದ ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕರಾದ ದೀಪಿಕಾ ನಾಯ್ಕ್, ಹುಮನಾಬಾದ ಹುಮನಾಬಾದ ತಾಲೂಕಾ ಆರೋಗ್ಯಾಧಿಕಾರಿ ಶಿವಕುಮಾರ ಸಿದ್ದೇಶ್ವರ, ಪೊಲೀಸ್ ಸಬ್ ಇನ್ಸ್‌ಪೇಕ್ಟರ್ ಸುರೇಶ್‌ಕುಮಾರ್, ಹುಮನಾಬಾದ ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟ್ ಗುಡಾಳ, ಹುಮನಾಬಾದ ಶಿಶು ಅಭಿವೃದ್ಧಿ ಅಧಿಕಾರಿ ಶಿವಪ್ರಕಾಶ ಹಿರೇಮಠ, ಬೀದರ ಜಿಲ್ಲಾ ಸಂಯೋಜಕರಾದ ಶಿವಕುಮಾರ ಅಜಿಮ್ ಪ್ರೇಮ್‌ಜೀ, ಹುಮನಾಬಾದ ಪುರಸಭೆ ಉಪಾಧ್ಯಕ್ಷ ಮುಕರಂಜಾ, ಹುಮನಾಬಾದ ಬಥನಿ ಸಂಸ್ಥೆ ಮುಖ್ಯಸ್ಥ ಸಿಸ್ಟರ್ ಲೀರಾ ಡಿಸೋಜಾ, ಹುಮನಾಬಾದ ತಾಲೂಕಾ ಮುಖ್ಯ ವೈದ್ಯಾಧಿಕಾರಿ ಡಾ.ನಾಗನಾಥ ಹುಲಸೂರೆ, ಮಾನಿನಿ ರಾಜ್ಯ ಓಕ್ಕೂಟ ಸದಸ್ಯರಾದ ಇಂದುಮತಿ ಹಾಗೂ ಅನಿಲ್ ವಾಸ್, ಸಹ ನಿರ್ದೇಕರು ಪಾ.ವಿಜಯ್‌ಕುಮಾರ್, ಕಾರ್ಯಕ್ರಮದ ವ್ಯವಸ್ಥಾಪಕರು ಸಿ.ಶೀಲಾ ಜೆನಿಫರ್, ಸಂಯೋಜಕರು, ಸ್ಥಳೀಯ ಸಂಯೋಜಕರು ಹಾಗೂ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸುವರು ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ.ವಿಕ್ಟರ್ ವಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಈಶ್ವರ ಬಿ ಖಂಡ್ರೆಯವರ ಹುಟ್ಟು ಹಬ್ಬದ ಪ್ರಯುಕ್ತ ವೃದ್ದರಿಗೆ ಹಣ್ಣು ಹಂಪಲು ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಅರಣ್ಯ, ಪರಿಸರ ಮತ್ತು ಜೀವ ಶಾಸ್ತ್ರ ಮಂತ್ರಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿಗಳಾದ ಈಶ್ವರ ಬಿ ಖಂಡ್ರೆಯವರ 62 ನೇ ಹುಟ್ಟು ಹಬ್ಬ ಪ್ರಯುಕ್ತ ಬೀದರ ಜಿಲ್ಲಾ ಕಾರ್ಮಿಕ ಉಪಾಧ್ಯಕ್ಷರಾದ ಪ್ರಭು ಬೆಣ್ಣೆ ಹೊಳಸಮುದ್ರ ಇವರ ನೇತೃತ್ವದಲ್ಲಿ ಬುಧವಾರ ಕಮಲನಗರ ಆಶಿರ್ವಾದ ವೃದ್ಧಾಶ್ರಮಕ್ಕೆ ಸುಮಾರು 50 ಜನರಿಗೆ ಹಣ್ಣು ಹಂಪಲು ಹಾಗೂ ಬ್ರೆಡ್ ವಿತರಣೆ ಮಾಡಿದರು.

ಪ್ರಭು ಬೆಣ್ಣೆ ಮಾತನಾಡಿ, ನಮ್ಮ ಜೀವನದಲ್ಲಿ ಹಿರಿಯ ಆಶೀರ್ವಾದ ಬಹಳ ಮುಖ್ಯವಾಗಿರುತ್ತದೆ. ಹಾಗಾಗಿ ನಮ್ಮ ಸಾಹೇಬ್ರ ಹುಟ್ಟುಹಬ್ಬದ ನಿಮಿತ್ಯ ಕಮಲನಗರ ಪಟ್ಟಣದ ಆಶೀರ್ವಾದ ವೃದ್ಧಾಶ್ರಮದಲ್ಲಿ ಎಲ್ಲಾ ಹಿರಿಯರಿಗೆ ಹಣ್ಣು ಹಂಪಲು ಹಾಗೂ ಬ್ರೇಡಗಳಿರುವ ಕಿಟಗಳನ್ನು ನೀಡಲಾಯಿತು.

ವೃದ್ಧ ಮರಿಯಪ್ಪ ಮಾತನಾಡಿ, ಈಶ್ವರ ಖಂಡ್ರೆ ಸಾಹೇಬರ ಹುಟ್ಟು ಹಬ್ಬ ನಮ್ಮಗೆ ಹಬ್ಬ ಇದ್ದಂತೆ ಈ ದಿನ ಅವರು ಅಭಿಮಾನಿಗಳು ಪ್ರತಿ ವರ್ಷ ಬಂದು ಆಹಾರ ಕಿಟ್ ನೀಡುವರು ಎಂದು ಹೇಳಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ಸಾಗರ ಮುಚಳಂಬೆ, ನರೇಶ ಹಿಪ್ಪಳಗಾವೆ, ಲಕ್ಷಮಣ ಬಿರಾದಾರ, ವೀರಭದ್ರ ಧನ್ನಾ, ಅಶೋಕ ಕಮಲನಗರ ಹಾಜರಿದ್ದರು.

## ತಾಳಿಕೋಟಿ ಸಹಕಾರಿ ಬ್ಯಾಂಕ್ ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆ: ಮನ್ಸೂರ



ತಾಳಿಕೋಟಿ: ಪಟ್ಟಣದಲ್ಲಿರುವ ತಾಳಿಕೋಟಿ ಸಹಕಾರಿ ಬ್ಯಾಂಕ್ ಜಿಲ್ಲೆಯಲ್ಲಿಯೇ ಹೆಸರುವಾಸಿಯಾದ ಪ್ರತಿಷ್ಠಿತ ಹಣಕಾಸಿನ ಸಂಸ್ಥೆಯಾಗಿ ಬೆಳೆದಿದೆ ಇದರ ಹಿತ ಕಾಯಲು ಆಡಳಿತ ಮಂಡಳಿಗೆ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಿ ಕಳಿಸುವ ಜವಾಬ್ದಾರಿ ಶೇರುದಾರರ ಮೇಲಿದೆ ಎಂದು ಅಲ್ಪಸಂಖ್ಯಾತ ಮುಖಂಡ ಇಬ್ರಾಹಿಂ ಮನ್ಸೂರ ಹೇಳಿದರು. ಬುಧವಾರ ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಓಲ್ಡ್ ಈಸ್ ಗೋಲ್ಡ್ ಪೆನಲ್ ವತಿಯಿಂದ ಹಮ್ಮಿಕೊಂಡ ಅಲ್ಪಸಂಖ್ಯಾತ ಸಮಾಜದ ಶೇರುದಾರರ ಸಭೆಯಲ್ಲಿ ಅವರು ಮಾತನಾಡಿದರು. ಈ ಪೆನಲ್ ದ ಅಭ್ಯರ್ಥಿಗಳು ಕಳೆದ ಹಲವಾರು ವರ್ಷಗಳಿಂದ ಈ ಬ್ಯಾಂಕಿನಲ್ಲಿ ಆಡಳಿತ ನಡೆಸುತ್ತಿದ್ದಾರೆ ಇವರ ಸೇವೆ ಕೇವಲ ಬ್ಯಾಂಕಿಗಾಗಿ ಇರದೇ ಪಟ್ಟಣದ ಹಲವಾರು ಕ್ಷೇತ್ರಗಳಲ್ಲಿಯೂ ಇದೆ ಇವರನ್ನು ಮತ್ತೇ ಮತ ಆಶೀರ್ವಾದ ಮಾಡಿ ಆಯ್ಕೆ ಮಾಡಲು ನಾವೆಲ್ಲರೂ ಪ್ರಯತ್ನಿಸೋಣ ಎಂದರು. ಪೆನಲ್ ಅಭ್ಯರ್ಥಿಗಳಾದ ಮುರಿಗೆಪ್ಪ ಸರಶೆಟ್ಟಿ, ಕಾಶಿನಾಥ ಸಜ್ಜನ ಹಾಗೂ ದ್ಯಾಮನಗೌಡ ಪಾಟೀಲ ಮಾತನಾಡಿ ನಾವು ಯಾವುದೇ ರೀತಿಯ ಭೇದ ಭಾವ ಮಾಡದೇ ಎಲ್ಲ ವರ್ಗದ ಶೇರುದಾರರ ಹಿತ ಕಾಯುವ ಕೆಲಸ ಮಾಡಿದ್ದೇವೆ ನಿಮ್ಮೆಲ್ಲರ ಆಶೀರ್ವಾದ ಮತ್ತೊಮ್ಮೆ ನಮ್ಮ ಮೇಲಿರಲಿ ಎಂದು ಮನವಿ ಮಾಡಿಕೊಂಡರು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು. ವೇದಿಕೆಯಲ್ಲಿ ಪೆನಲ್ ಅಭ್ಯರ್ಥಿಗಳಾದ ದತ್ತಾತ್ರೇಯ ಹೆಬಸೂರ, ಈಶ್ವರಪ್ಪ ಬಿಳೇಭಾವಿ, ಬಾಬುಹಜೇರಿ, ಚಿಂತಪ್ಪಗೌಡ ಯಾಳಗಿ, ನಾಗಪ್ಪ ಚಿನಗುಡಿ, ಸುರೇಶ್ ಪಾಟೀಲ, ಸಂಜೀವಪ್ಪ ಬರದೇನಾಳ, ರಾಮಪ್ಪ ಕಟ್ಟಿಮನಿ ಗಣ್ಯರಾದ ಗನಿಸಾಬ ಲಾಹೋರಿ, ಮಸೂಮಸಾಬ್ ಕೆಂಭಾವಿ, ಕಾಶಿನಾಥ ಮುರಾಳ, ಸಿಕಂದರ ವಠಾರ, ಅಬ್ದುಲ್ ಸತ್ತಾರ ಅವಟಿ, ವಾಸು ಹೆಬಸೂರ, ಖಾಜಾ ಹುಸೇನ ಮುಲ್ಲಾ, ಹಸನಸಾಬ ಮನಗೂಳಿ, ಮಹಿಬೂಬಸಾಬ ಹಂಡೇಬಾಗ, ಹನೀಫ್ ಬೇಪಾರಿ, ಹಸನ್ ಕೊರ್ಕಿ, ಮಹಿಬೂಬ್ ಕೆಂಭಾವಿ, ತನ್ವೀರ್ ಮನಗೂಳಿ, ಜಗದೀಶ ಬಿಳೆಭಾವಿ ಮತ್ತಿತರರು ಇದ್ದರು.

## ಆಧ್ಯಾತ್ಮದ ಅನುಸಂಧಾನವೇ ಗುರು ಶಿಷ್ಯರ ಸಂಬಂಧ – ಹಾರಕೂಡ ಶ್ರೀ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಆಧ್ಯಾತ್ಮದ ಅನುಸಂಧಾನವೇ ಗುರು ಶಿಷ್ಯರ ನಿಜವಾದ ಸಂಬಂಧ ಎಂದು ಹಾರಕೂಡದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಆಲಗೂಡ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಏರ್ಪಡಿಸಿದ 38ನೇ ಶಿವಾನುಭವ ಚಿಂತನ ಸಮಾರಂಭದ ಪಾವನ ಸನ್ನಿಧಾನ ವಹಿಸಿ ಮಾತನಾಡಿದ ಶ್ರೀಗಳು ನಾವು ಸನ್ಮಾರ್ಗದಲ್ಲಿ ನಡೆದಾಗಲೂ ಲೋಕ ನಿಂದೆಗಳು ಬರುವುದು ಸಹಜ, ಲೋಕ ನಿಂದನೆಗೆ ಧೃತಿಗೆಡದೆ ಸರ್ವರಿಗೂ ಪ್ರೀತಿಯಿಂದ ಹಿತವನ್ನೇ ಬಯಸುವವ ದೇವಮಾನವನಾಗುತ್ತಾನೆ.

ಈ ಜಗತ್ತಿನಲ್ಲಿ ಹೆತ್ತ ತಾಯಿಯ ಆಶೀರ್ವಾದಕ್ಕಿಂತ ಶ್ರೇಷ್ಠ ಅನುಗ್ರಹ ಇನ್ನೊಂದಿಲ್ಲ.

ತಾಯಿಯ ಪವಿತ್ರ ಪಾದ ಸ್ವರ್ಗಕ್ಕೆ ಸಮಾನ.

ಯಾವ ದೇವರ ಆರಾಧನೆ ಮಾಡಿದರೂ ಹೆತ್ತ ತಾಯಿಯ ಸೇವೆ ಮಾಡುವುದು ಯಾವ ಕಾರಣಕ್ಕೂ ಅಲ್ಲಗಳೆಯಬಾರದು.

ತಾಯಿಯೇ ಪರಮ ದೈವವೆಂದು ತಿಳಿದು, ತಂದೆ ತಾಯಿಯರ ಸೇವೆಯಿಂದ ಸಕಲೈಶ್ವರ್ಯ ಪ್ರಾಪ್ತವಾಗಿ ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ.

ಗುರುಭಕ್ತಿಯನ್ನೇ ಉಸಿರಾಗಿಸಿಕೊಂಡು ಸತ್ಕಾರ್ಯಗಳನ್ನು ಮಾಡುತ್ತಿರುವ ಆಲಗೂಡ ಜನತೆಗೆ ಶ್ರೀ ವೀರಭದ್ರೇಶ್ವರ ಹಾಗೂ ಹಾರಕೂಡ ಚನ್ನಬಸವ ಶಿವಯೋಗಿಗಳ ದಿವ್ಯಕೃಪೆಯಿಂದ ಶ್ರೇಯಸ್ಸಿನ ಬದುಕು ಸಾಧ್ಯವಾಗಲಿ, ಸರ್ವರಿಗೂ ಶುಭವಾಗಲಿ ಎಂದು ಹಾರೈಸಿದರು.

ಶಾಸಕರಾದ ಶರಣು ಸಲಗರ ಮಾತನಾಡಿ ದೇಶದ ಸರ್ವಾಂಗಣ ಸದ್ವಿಕಾಸಕ್ಕಾಗಿ ಸಮರ್ಥ ಯುವಶಕ್ತಿಯ ಅಗತ್ಯವಿದ್ದು, ರಾಷ್ಟ್ರಮಾತೆ ಜೀಜಾಮಾತೆಯಂತೆ ಎಲ್ಲಾ ತಾಯಂದಿರು ತಮ್ಮ ಮಕ್ಕಳನ್ನು ಸಾಮ್ರಾಟ್ ಛತ್ರಪತಿ ಶಿವಾಜಿ ಮಹಾರಾಜರ ಚೈತನ್ಯ ಕುಡಿಗಳಂತೆ ಬೆಳೆಸಬೇಕು.

ಬಸವಾದಿ ಶರಣರ ಪುಣ್ಯಭೂಮಿ ಸಾಧ್ಯತೆಗಳ ಶ್ರೇಷ್ಠಭೂಮಿಯಾಗಿದ್ದು, ಈ ನೆಲದ ವಾರಸುದಾರರು ನಾವುಗಳು ಎನ್ನುವ ಹೆಮ್ಮೆ ನಮಗಿರಬೇಕು ಎಂದು ನುಡಿದರು.

ಮಾಜಿ ವಿಧಾನ ಪರಿಷತ್ ಸದಸ್ಯರಾದ ವಿಜಯ ಸಿಂಗ್, ಖ್ಯಾತ ಪ್ರವಚನಕಾರರಾದ ದಯಾನಂದ ಹಿರೇಮಠ ಮಾತನಾಡಿದರು. ಈ ಸಂದರ್ಭದಲ್ಲಿ

ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಶರಣು ಆಲಗೂಡ, ಗ್ರಾಮ ಪಂಚಾಯತ ಅಧ್ಯಕ್ಷೆ ಮೇಘಾ ವಿದೇಶ ಸಗರ, ಪಿಎಸ್‌ಐ ಸುವರ್ಣ ಮಲ್ಲಶೆಟ್ಟಿ, ನಾಗೇಶ ಸ್ವಾಮಿ, ಶರಣಪ್ಪಾ ಬಂಗಾರೆ, ಬಸಯ್ಯ ಸ್ವಾಮಿ, ಗುಲಾಬ ಪಾಟೀಲ, ಗಣೇಶ ಸೋಮವಂಶೆ, ಮೋಹನ ಉಕ್ಕಾವಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರವಿ ಠಮಕೆ ಸ್ವಾಗತಿಸಿದರು. ಕಾರ್ತಿಕ ಬಡದಾಳೆ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು. ಭಾಗ್ಯ ಮಠಪತಿ ವಚನ ಗಾಯನ ಪ್ರಸ್ತುತಪಡಿಸಿದರು. ನವಲಿಂಗ ಪಾಟೀಲ ನಿರೂಪಿಸಿದರು. ಗುರುನಾಥ ಬಡದಾಳೆ ವಂದಿಸಿದರು.

## ಇಂದು ಆರ್ಬಿಟ್ ಸಂಸ್ಥೆಯ 30 ವರ್ಷಗಳ ಸಂಭ್ರಮಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಇಂದು ಆರ್ಬಿಟ್ ಸಮಾಜ ಸೇವೆ ಸಂಸ್ಥೆಯು 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದೆ ಹಾಗೂ ಇದರ ಸಂಭ್ರಮಾಚರಣೆಯನ್ನು ಇಂದು ದಿನಾಂಕ 16, ಜನವರಿ 2025ರಂದು ಹಮ್ಮಿಕೊಂಡಿದ್ದೇವೆ. ಸಮಾಜದ ಉದ್ಧಾರಕ್ಕಾಗಿ ನಾವು ಪಟ್ಟ ಕಷ್ಟಗಳನ್ನು, ಮಾಡಿದ ತ್ಯಾಗಗಳನ್ನು, ಮಾಡಿದ ಸಾಧನೆಗಳನ್ನು ನಿಮ್ಮ ಜೊತೆ ಹಂಚಿಕೊಳ್ಳಲು ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ.

ಈ ಕಾರ್ಯಕ್ರಮವು ಬೆಳಗ್ಗೆ 11:00ಗೆ ಹುಮ್ನಾಬಾದ್ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ. ಆದುದ್ದರಿಂದ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ.ವಿಕ್ಟರ್ ಅನಿಲ್ ವಾಸ್, ಸಹ ನಿರ್ದೇಕರು ಪಾ.ವಿಜಯ್‌ಕುಮಾರ್, ಕಾರ್ಯಕ್ರಮದ ವ್ಯವಸ್ಥಾಪಕರು ಸಿ.ಶೀಲಾ ಜೆನಿಫರ್, ಸಂಯೋಜಕರು, ಸ್ಥಳೀಯ ಸಂಯೋಜಕರು ಹಾಗೂ ಸಂಸ್ಥೆಯ ಸಿಬ್ಬಂದಿ ವರ್ಗದವರು ಆರ್ಬಿಟ್‌ನ ಜುಬಿಲಿ ಮಹೋತ್ಸವಕ್ಕೆ ನಿಮ್ಮನ್ನು ಪ್ರೀತಿ ಪೂರ್ವಕವಾಗಿ ಸ್ವಾಗತಿಸುತ್ತೇವೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಆಗಮಿಸಿ ಭಾಗವಹಿಸಬೇಕಾಗಿ ವಿನಂತಿಕೊಂಡಿದ್ದಾರೆ.

## ಜನವರಿ 17 ರಂದು ಅಭಿನಂದನಾ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.15-ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಕರ ಸಂಘ, ಶಿಕ್ಷಕೇತರ ನೌಕರರ ಒಕ್ಕೂಟ, ಶಿಕ್ಷಕೇತರ ನೌಕರರ ಸಂಘ, ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ, ಪಂಗಡದ ನೌಕರರ ಸಂಘ ಹಾಗೂ ವಿಶ್ವವಿದ್ಯಾಲಯದ ಗುತ್ತಿಗೆ ನೌಕರರ ಕಲ್ಯಾಣ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ದಯಾನಂದ ಅಗಸರ ಇವರು ಕುಲಪತಿ ಸೇವಾವಧಿ ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಅಭಿನಂದನಾ ಸಮಾರಂಭವನ್ನು ಜನವರಿ 17 ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ದಯಾನಂದ ಅಗಸರ ಅವರನ್ನು ಸನ್ಮಾನಿಸಲಾಗುತ್ತದೆ. ಈ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಬಿ.ಜಿ. ಮೂಲಿಮನಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಗುಲಬರ್ಗಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು, ಸಮಾಜ ವಿಜ್ಞಾನ ನಿಕಾಯದ ಡೀನರು ಹಾಗೂ ಸ್ನಾತಕೋತ್ತರ ಶಿಕ್ಷಕರ ಸಂಘದ ಅಧ್ಯಕ್ಷರಾದ ಪ್ರೊ. ಗೂರು ಶ್ರೀರಾಮುಲು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಗುಲಬರ್ಗಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ. ರೇಷ್ಮಾ ಕೌರ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಹಾಗೂ ಶಿಕ್ಷಣ ನಿಕಾಯದ ಡೀನರಾದ ಪ್ರೊ. ಹೂವಿನಬಾವಿ ಬಾಬಣ್ಣ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು. ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ರಮೇಶ ಲಂಡನಕರ್, (ಮೌಲ್ಯಮಾಪನ) ಕುಲಸಚಿವ ಪ್ರೊ. ಮೇಧಾವಿನಿ ಕಟ್ಟಿ ಹಾಗೂ ವಿತ್ತಾಧಿಕಾರಿ ಗಾಯತ್ರಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಕಲ್ಪತರು ನಾಡಿನಲ್ಲಿ ಜ.18, 19ರಂದು ಎರಡು ದಿನ ಕಾರ್ಯನಿರತ ಪತ್ರಕರ್ತರ 39ನೇ ರಾಜ್ಯಸಮ್ಮೇಳನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಉದ್ಘಾಟನೆ

ಮಲ್ಲಮ ನುಡಿ ವಾರ್ತೆ ಬೆಂಗಳೂರು:

ಕಲ್ಪತರುನಾಡುತುಮಕೂರಿನಲ್ಲಿ ಕರ್ನಾಟಕಕಾರ್ಯನಿರತಪತ್ರಕರ್ತರ ಸಂಘ,ಸಂಘಟನೆ ಮಾಡುವ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಜ.18 ಮತ್ತು 19 ರಂದು ಎರಡು ದಿನಗಳ ಕಾಲ ಆಯೋಜಿಸಲಾಗಿದೆ ಎಂದು ಸಂಘದರಾಜ್ಯಾಧ್ಯಕ್ಷಶಿವಾನಂದ ತಗಡೂರು ತಿಳಿಸಿದ್ದಾರೆ.

ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿ, ಜ.18ರಂದು ಸಮ್ಮೇಳನವನ್ನುಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡಲಿದ್ದಾರೆ ಎಂದರು.

ಡಿವಿಜಿಸಂಸ್ಥಾಪಿಸಿದಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಶತಮಾನೋತ್ಸದತ್ತ ಮುನ್ನಡೆಯುತ್ತಿದ್ದು,ರಾಜ್ಯದ ಹತ್ತು ಸಾವಿರಕ್ಕೂ ಹೆಚ್ಚಿನ ಕಾರ್ಯನಿರತ ಪತ್ರಕರ್ತರ ಸದಸ್ಯತ್ವಉಳ್ಳದೇಶದ ಏಕೈಕ ಬೃಹತ್ ಸಂಘಟನೆಯಾಗಿದೆ ಎಂದರು.

ಪತ್ರಕರ್ತರುಎದುರಿಸುತ್ತಿರುವ ವೃತ್ತಿ ಪರ ಸಮಸ್ಯೆಗಳು , ಆರೋಗ್ಯ, ಪ್ರೋತ್ಸಾಹಕ ಯೋಜನೆಗಳಸಂಬಂಧಿಸಿದಂತೆ ಸರ್ಕಾರದಗಮನಸೆಳೆಯಲು ಸಮ್ಮೇಳನಗಳು ಸಮರ್ಥ ವೇದಿಕೆಯಾಗುತ್ತವೆ.

ಈ ಎಲ್ಲಾ ಸಂಘಟನಾತ್ಮಕ ಚಟುವಟಿಕೆಗಳನ್ನುವಾರ್ಷಿಕ ಸಮ್ಮೇಳನಗಳಲ್ಲಿ ಮಂಥನ ಮಾಡುವ ಅವಕಾಶವನ್ನು ಸೃಷ್ಟಿಕೊಳ್ಳಲಾಗಿದೆ.ಪತ್ರಿಕೋದ್ಯಮ, ಪತ್ರಕರ್ತರುಸೇರಿದಂತೆನ್ಯೂಸ್ ರೂಂನ ಎಲ್ಲಾ ಆಯಾಮಗಳ ಕುರಿತು ಚಿಂತನ–ಮಂಥನ ಮಾಡುವುದು , ಈ ಮೂಲಕ ಪತ್ರಿಕೋದ್ಯಮದ ಸಮಗ್ರ ಹಿನ್ನೋಟ,ಮುನ್ನೋಟಗಳನ್ನು ಕಾಣುವುದುಸಮ್ಮೇಳನದಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ ಎಂದರು.

ಜ. 18 ರಂದು ಬೆಳಗ್ಗೆ 8.30ಕ್ಕೆತುಮಕೂರಿನ ಟೌನ್ ಹಾಲ್ ಬಿಜಿಎಸ್ ವೃತ್ತದಿಂದ ಪತ್ರಕರ್ತರಸಾಂಸ್ಕೃತಿಕಮೆರಗಿನ ಮೆರವಣಿಗೆಯನ್ನು ಗೃಹ ಸಚಿವರೂ, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಡಾ.ಜಿ ಪರಮೇಶ್ವರ್ ಅವರು ಉದ್ಘಾಟಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಈ ಸಮಾರಂಭಗಳಲ್ಲಿ ಹಿರೇ ಮಠಾಧೀಶ್ವರಾದಡಾ.ಶ್ರೀಶಿವಾನಂದ ಶಿವಾಚಾರ್ಯ ಸ್ವಾಮೀಜಿ, ರಾಮಕೃಷ್ಣ ವಿವೇಕಾನಂದ ಆಶ್ರಮದಡಾ.ಶ್ರೀವಿರೇಶಾನಂದ ಸರಸ್ವತಿ ಸ್ವಾಮೀಜಿ, ಸ್ವಾಮಿ ಜಪಾನಂದಜೀ ಸಾನಿಧ್ಯ ವಹಿಸಲಿದ್ದಾರೆ.

ಇದೇ ದಿನ ಬೆಳಗ್ಗೆ 11 ಗಂಟೆಗೆ ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯದಆವರಣದಲ್ಲಿ ನಿರಸಲಾಗಿರುವತ್ರಿವಿಧದಾಸೋಹಿ ಡಾ. ಶಿವಕುಮಾರ ಸ್ವಾಮೀಜಿ ವೇದಿಕೆಯಲ್ಲಿ ಸಿದ್ದಗಂಗಾ ಮಠದ ಸಿದ್ದಲಿಂಗಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಮುಖ್ಯಮಂತ್ರಿಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.ತುಮಕೂರು ಜಿಲ್ಲೆಯ ಹಾಲಿ ಶಾಸಕರು, ಮಾಜಿಶಾಸಕರು,ಸಂಸದರುಗಳು ಅತಿಥಿಗಳಾಗಿಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷರಾದ ಟಿ ವಿ ಶಿವಾನಂದ ತಗಡೂರು ವಹಿಸಲಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ ಸಚಿವ ಕೆ.ಎನ್ ರಾಜಣ್ಣಹಾಗೂ ಜಿಲ್ಲೆಯ ಎಲ್ಲಾ ಶಾಸಕರುಗಳು ಆತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಂವಾದ ಗೋಷ್ಠಿಗಳು:

ಎರಡು ದಿನಗಳ ಸಮ್ಮೇಳನದಲ್ಲಿ ಪತ್ರಿಕೋದ್ಯಮಕ್ಕೆಸಂಬಂಧಿಸಿದಂತೆ ಮಹತ್ವದ ಸಂವಾದ ಮತ್ತು ಗೋಷ್ಠಿಗಳು ನಡೆಯಲಿವೆ.

ಜ. 18 ರಂದು ಮಧ್ಯಾಹ್ನ 2 ಗಂಟೆಗೆ ಸಂವಿಧಾನ ಮತ್ತು ಮಾಧ್ಯಮ ವಿಷಯವಾಗಿ ನಡೆಯುವ ಗೋಷ್ಠಿಯನ್ನು ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ ಪಾಟೀಲ್ ಅವರುಉದ್ಘಾಟಿಸಲಿದ್ದು,ಖ್ಯಾತ ಪತ್ರಕರ್ತ, ಮಾಧ್ಯಮ ತಜ್ಞ ಜಿ.ಎನ್ ಮೋಹನ್ ಅವರು ವಿಷಯ ಮಂಡಿಸಲಿದ್ದು, ಮುಖ್ಯಮಂತ್ರಿಗಳುರಾಜಕೀಯ ಸಲಹೆಗಾರರಾದ ಬಿ.ಆರ್ ಪಾಟೀಲ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ, ಶಾಸಕರೂ ಆದ ಎ ಎಸ್ ಪೊನ್ನಣ್ಣ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಂಜೆ 4.30ಕ್ಕೆ ಸುದ್ದಿಮನೆ ಮತ್ತು ಪೋಟೋಗ್ರಾಫಿ ಗೋಷ್ಠಿಯಲ್ಲಿಹಿರಿಯಪತ್ರಕರ್ತ ಕೆ. ಶಿವಸುಬ್ರಹ್ಮಣ್ಯ ಅವರು ಉದ್ಘಾಟಿಸಲಿದ್ದು, ಹಿರಿಯ ಪತ್ರಿಕಾಛಾಯಾಗ್ರಾಹಕಕೆ.ಗೋಪಿನಾಥ್ ಅನುಶಾಂತರಾಜ್ ಶರಣು ಬಸಪ್ಪ ಪಾಲ್ಗೊಳ್ಳಲಿದ್ದಾರೆ.

ಜ. 19 ರಂದು ಬೆಳಗ್ಗೆ 10.30ಕ್ಕೆ ಮಾಧ್ಯಮ ಮತ್ತು ಓದುಗರು /ನೋಡುಗರು/ ಕೇಳುಗರು ಗೋಷ್ಠಿಯನ್ನು ವಿಜಯವಾಣಿಸಂಪಾದಕರಾದ ಕೆ.ಎನ್‌ಚನ್ನೆಗೌಡಉದ್ಘಾಟಿಸಿದರೆ, ಪ್ರಜಾವಾಣಿ ಸಂಪಾದಕರಾದ ರವೀಂದ್ರಭಟ್ ಐನಕೈ ಅವರು ಅಧ್ಯಕ್ಷತೆವಹಿಸಲಿದದಾರೆ.ಹಿರಿಯ ಪತ್ರಕರ್ತರಾದಅನಂತಚಿನಿವಾರ, ಮೈಸೂರುವಿವಿಪತ್ರಿಕೋದ್ಯಮ ವಿಭಾಗದಮುಖ್ಯಸ್ಥರಾದಎಂ ಎಸ್ ಸ್ವಪ್ನ, ಅವರುಗಳು ಭಾಗವಹಿಸಲಿದ್ದಾರೆ.

ಮಧ್ಯಾಹ್ನ12 ಕ್ಕೆಸಾಮಾಜಿಕ ಜಾಲತಾಣ ಮತ್ತುಪತ್ರಕರ್ತರ ಸವಾಲುಗಳು ಗೋಷ್ಠಿಯನ್ನು ಸುವರ್ಣನ್ಯೂಸ್ ಸಂಪಾದಕರ ಅಜಿತ್ ಹನುಮಕ್ಕನವರ್ ಉದ್ಘಾಟಿಸಲಿದ್ದು,ವಿಜಯಕರ್ನಾಟಕ ಸಂಪಾದಕರಾದ ಸುದರ್ಶನ ಚನ್ನಂಗಿಹಳ್ಳಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.ಹಿರಿಯಪತ್ರಕರ್ತ ಗೌರೀಶ್ ಅಕ್ಕಿ , ಕಸ್ತೂರಿ ಸಂಪಾದಕರಾದ ಶಾಂತಲಾ ಧರ್ಮರಾಜ್,ದಾವಣಗೆರೆವಿವಿ ಡಾ. ಶಿವಕುಮಾರ ಕಣಸೋಗಿ ಪಾಲ್ಗೋಳ್ಳಲಿದ್ದಾರೆ.

ಮಧ್ಯಾಹ್ನ2.30ಕ್ಕೆಸ್ಥಳೀಯ ಪತ್ರಿಕೆಗಳು/ಜಾಹೀರಾತು/ವಿತರಕರು ಗೋಷ್ಠಿಯನ್ನುವಾರ್ತಾ ಇಲಾಖೆ ಆಯುಕ್ತಹೇಮಂತನಿಂಬಾಳ್ಕರ್ ಉದ್ಘಾಟಿಸಲಿದ್ದು ಹಿರಿಯಪತ್ರಿಕಾ ಸಂಪಾದಕರಾದ ಎಸ್ ನಾಗಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

ಎರಡು ದಿನಗಳಗೋಷ್ಠಿಗಳಲ್ಲಿ ಸಂವಾದಕರಾಗಿ ಹಿರಿಯ ಪತ್ರಕರ್ತರಾದ ಗಂಗಾಧರ ಮೊದಲಿಯಾರ್,ಶಿವಕುಮಾರ್ ಬೆಳ್ಳಿತಟ್ಟೆ,ಉಗಮ ಶ್ರೀನಿವಾಸ್, ಕುಚ್ಚಂಗಿ ಪ್ರಸನ್ನ,ಮರಿಯಪ್ಪ, ಉಮೇಶ್ ಭಟ್ ,ಹರೀಶ್ ರೈ, ಗುರುನಾಥ್,ಬಿ.ಎಂ ಹನೀಫ್, ಟಿಎಂಸತೀಶ್ ಮೊದಲಾದವರು ಭಾಗವಹಿಸಲಿದ್ದಾರೆ.

ಸಮ್ಮೇಳನದಲ್ಲಿಕಾರ್ಯನಿರತ ಪತ್ರಕರ್ತರಸಂಘದಪ್ರತಿನಿಧಿಗಳ ಸಭೆ ಮತ್ತು ಕಲ್ಪತರು ಪ್ರಶಸ್ತಿ ಪ್ರದಾನಸಮಾರಂಭನಡೆಯಲಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರಸಂಘ ತುಮಕೂರು ಜಿಲ್ಲಾ ಶಾಖೆಯು ಸಮ್ಮೇಳನದ ಆತಿಥ್ಯ ವಹಿಸಿದ್ದು ಜಿಲ್ಲಾ ಘಟಕದ ಅಧ್ಯಕ್ಷರಾದ ಚಿ ನಿ ಪುರುಷೋತ್ತಮ, ಪ್ರಧಾನ ಕಾರ್ಯದರ್ಶಿ ರಘುರಾಮ್‌ತಂಡಅವಿರತವಾಗಿ ಶ್ರಮಿಸುತ್ತಿದೆ.

ಸಮ್ಮೇಳನವು ಸಾಂಸ್ಕೃತಿಕ ಸಮಾರಂಭಗಳನ್ನುಒಳಗೊಂಡಿದ್ದು ಖ್ಯಾತ ಗಾಯಕಿ ಶಮಿತ ಮಲ್ನಾಡ್ ಅವರ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆಎಂದು ಶಿವಾನಂದ ತಗಡೂರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಖಜಾಂಚಿ ವಾಸುದೇವ ಹೊಳ್ಳ, ರಾಜ್ಯ ಸಮಿತಿ ಸದಸ್ಯರಾದದೇವರಾಜು, ಬೆಂಗಳೂರುಘಟಕದಶಿವರಾಜು ಮತ್ತಿತರರು ಹಾಜರಿದ್ದರು




# ನಕಲಿ ಮದ್ಯ ಮಾರಾಟ

## ಕ್ರಮಕೈಗೊಳ್ಳದ ಪೋಲಿಸ ಇಲಾಖೆ

ಮಲ್ಲಮ್ಮ ನುಡಿ ವಾರ್ತೆ

ನಾರಾಯಣಪುರ :ಜ.15: ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ನಾರಾಯಣಪುರ ಪೋಲಿಸ ಠಾಣೆಯ ವ್ಯಾಪ್ತಿಯ ದೇವರಗಡ್ಡಿ ಶ್ರೀ ಗಡ್ಡಿಗದ್ದೇಮ್ಮ ದೇವಿಯ

ಜಾತ್ರೆಯಲ್ಲಿ ಬಹಿರಂಗವಾಗಿ ನಕಲಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಜ.13 ರಂದು ವರದಿ ಮಾಡಿದರು ಮದ್ಯ ಮಾರಾಟಗಾರರ ಮೇಲೆ ನಾರಾಯಣಪುರ ಪೋಲಿಸ ಠಾಣೆಯ ಸಿಬ್ಬಂದಿ ಕ್ರಮಕೈಗೊಳ್ಳದೆ ಜ.14 ರಂದು ರಥೋತ್ಸವದ ಸಂದರ್ಭದಲ್ಲೂ ನಕಲಿ ಮದ್ಯ ಮಾರಾಟಕ್ಕೆ ಅವಕಾಶ ಕಲ್ಪಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕಾನೂನು

ಸುವ್ಯವಸ್ಥೆ ಕಾಪಾಡುವವರೇ ಸುಮ್ಮನಿರುವುದು ಬೇಲಿಯೇ ಎದ್ದು ಹೊಲ ಮೇದಂತಾಗಿದೆ ಎನ್ನುವಂತಾಗಿದೆ. ನಕಲಿ ಮದ್ಯ ಮಾರಾಟ,ಜೂಜಾಟ, ಮಟ್ಕಾ, ಕೋಳಿ ಪಂದ್ಯದಂತಹ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಮೂಲಕ ಜನರಲ್ಲಿ ಪೋಲೀಸ ಇಲಾಖೆ ಬಗ್ಗೆ ನಂಬಿಕೆ

ಬರುವಂತೆ ಮಾಡಬೇಕು ಎಂಬುದು ಜನರ ಸದಾಶಯವಾಗಿದೆ.

ಪೋಲೀಸ ವರಿಷ್ಠಾಧಿಕಾರಿಗಳು ಇಲಾಖೆಯಲ್ಲಿರುವ ಅಕ್ರಮ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಸಿಬ್ಬಂದಿ ವಿರುದ್ಧ ಕ್ರಮಕೈಗೊಳ್ಳಲು ಮುಂದಾಗುವರೆ ಕಾದು ನೋಡಬೇಕು.

# ಎನ್‌ಡಿಪಿಎಸ್ ಕಾಯ್ದೆಯಡಿ ವಶಪಡಿಸಿಕೊಂಡಿದ್ದ ಗಾಂಜಾ, ಡಿಸ್ಪೋಸಲ್ ಕಮಿಟಿಯಿಂದ ನಾಶ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 15 : ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಎನ್ಡಿಪಿಎಸ್ ಕಾಯ್ದೆ ಪ್ರಕರಣಗಳಲ್ಲಿವಶಪಡಿಸಿಕೊಂಡಿದ್ದ ಅಕ್ರಮ ಗಾಂಜಾ ಹಾಗೂ ಇತರ ಮಾದಕ ವಸ್ತುಗಳನ್ನು ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಕಮಿಟಿಯಿಂದನಾಶಗೊಳಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



ಜಿಲ್ಲಾದ್ಯಂತ ಅಕ್ರಮವಾಗಿ ಗಾಂಜಾ ಬೆಳೆಯುತ್ತಿದ್ದ, ಸಾಗಾಣಿಕೆ, ಮಾರಾಟ ಮಾಡುತ್ತಿದ್ದವರ ಮೇಲೆ ದಾಳಿ ಮಾಡಿ ಎನ್.ಡಿ.ಪಿ.ಎಸ್. ಕಾಯ್ದೆಯಡಿ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿ, ಗಾಂಜಾ ಹಾಗೂ ಇತರ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಇಲ್ಲಿವರೆಗೆವಶಪಡಿಸಿಕೊಂಡಿದ್ದ ಒಟ್ಟು 5 ಕೋಟಿ ರೂ. ಗಿಂತ ಹೆಚ್ಚು ಮೌಲ್ಯದ, 712 ಕೆ. ಜಿ ಕ್ಕಿಂತ ಹೆಚ್ಚು ಗಾಂಜಾ ಹಾಗೂ 16 ಕೆ. ಜಿ ಕ್ಕಿಂತ ಹೆಚ್ಚು ಇತರ ಮಾದಕ ವಸ್ತುಗಳು ಇಂದು ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಕಮಿಟಿ ಪಡೆದುಕೊಂಡು ನಿಯಮಾನುಸಾರನಾಶಗೊಳಿಸಲು ಕ್ರಮವಹಿಸಿ ಬೀದರ್ ಜಿಲ್ಲೆಯ ಧನ್ನೂರ ಗ್ರಾಮದಲ್ಲಿರುವ ಇನ್ನರೋ ಬಯೋಟಿಕ್ ಜೈವಿಕ ತ್ಯಾಜ್ಯ ವಿಲೇವಾರಿ ಘಟಕದ ಕುಲುಮೆಯಲ್ಲಿ ನಾಶಪಡಿಸಲಾಗಿದೆ ಎಂದು ತಿಳಿಸಲಾಗಿದೆ.

# ಉರಗಪ್ರೇಮಿ ವಸಂತಗೆ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.15: ಜಿಲ್ಲೆಯ ಕೆರೆಹಳ್ಳಿ ಗ್ರಾಮ ಸೇರಿದಂತೆ ಸುತ್ತ ಮುತ್ತಲ ಹಲವಾರು ಗ್ರಾಮಗಳಲ್ಲಿಪರಿಸರ,ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮತ್ತು ಜಾಗೃತಿ ಮೂಡಿಸುತ್ತಿರುವ ಉರಗ ಪ್ರೇಮಿ ವಸಂತ್ ಶಿಳ್ಳೆಕ್ಯಾತರ್ ಇವರಿಗೆ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರನೀಡಿ ಗೌರವಿಸಲಾಗಿದೆ.

ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ತಾಲೂಕಿನ ಗುಳದಳ್ಳಿಯ ಶ್ರೀ ಸ್ವಾಮಿ ವಿವೇಕಾನಂದಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 14ನೇ ಶಾಲಾ ವಾರ್ಷಿಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀ ಸ್ವಾಮಿ ವಿವೇಕಾನಂದರ 162ನೇ ಜಯಂತ್ಯೋತ್ಸವ ಹಾಗೂ ಸರಸ್ವತಿ ಪೂಜಾ ಸಮಾರಂಭದಲ್ಲಿ ವಸಂತ್ ಶಿಳ್ಳೆಕ್ಯಾತರ್ ಅವರಿಗೆ ಪ್ರಸಕ್ತ ಸಾಲಿನ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗಿದೆ.



ಶಾಲೆಯ ಕಾರ್ಯದರ್ಶಿ ರಮೇಶ್ ಫಕೀರಪ್ಪಹೊಳೆಯಾಚೆ ಇವರು ವಸಂತ್ ಅವರ ವನ್ಯಜೀವಿ ಕಾಳಜಿಯನ್ನು ಗುರುತಿಸಿ, ಸಂಸ್ಥೆಯ ವತಿಯಿಂದ ವನ್ಯಜೀವಿ ಕ್ಷೇತ್ರ ವಿಭಾಗದಲ್ಲಿ ಈ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಸಂತ್ ಅವರಂತೆ ಎಲ್ಲ ಗ್ರಾಮಗಳ ಯುವಕರು ಇದೇರೀತಿ ವನ್ಯ ಜೀವಿಗಳನ್ನು ರಕ್ಷಿಸಲು ಮುಂದಾಗಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ.

ಮೂಲತಃ ಕೆರೆಹಳ್ಳಿ ಗ್ರಾಮದ ವಸಂತ್ ಶಿಳ್ಳೆಕ್ಯಾತರ್ ಬಡತನದಲ್ಲಿ ಹುಟ್ಟಿದವರು. ಹುಚ್ಚಪ್ಪ ಮತ್ತು ಪಕ್ಕಿರಮ್ಮ ದಂಪತಿಗಳ ಪುತ್ರನಾಗಿರುವ ವಸಂತ್ ಬಾಲ್ಯದಲ್ಲಿ ಕುರಿ, ಆಡುಗಳನ್ನು ಮೇಯಿಸಿಕೊಂಡು ಸದಾ ಗುಡ್ಡಗಾಡು ಪ್ರದೇಶದಲ್ಲಿ ಜೀವನ ಕಳೆದವರು. ಯೌವನಾವಸ್ಥೆಗೆ ಬರುತ್ತಿದ್ದಂತೆ ಕುರಿ, ಆಡು ಮೇಯಿಸುವ ಕಾಯಕದಿಂದ ವಿಮುಖರಾಗಿ ಬೆಂಗಳೂರಿಗೆ ಹೊಟ್ಟೆಪಾಡು ಅರಸಿ ವಲಸೆ ಹೋಗಿದ್ದರು. ಬಳಿಕ ಮರಳಿ ಹುಟ್ಟೂರಿಗೆ ತೆರಳಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗಿರುವಾಗ ಗ್ರಾಮವೊಂದರಲ್ಲಿ ಹಾವು ಕಂಡ ತಕ್ಷಣ ಸ್ಥಳೀಯರು ಸಾಯಿಸಲು ಹೊರಟಿದ್ದರು. 'ಕೊಲ್ಲಬೇಡಿ, ಅವೂ ನಮ್ಮಂತೆ ಜೀವಿಗಳು' ಎಂದು ತಿಳುವಳಿಕೆ ಮೂಡಿಸಿ ಅಂದಿನಿಂದ ಹಾವುಗಳನ್ನು ಹಿಡಿಯುವ ಕಾಯಕ ಮಾಡಿಕೊಂಡಿದ್ದಾರೆ.

ಕೆರೆಹಳ್ಳಿ,ಗುಳದಳ್ಳಿ,ಶಹಪುರ, ಲಿಂಗದಹಳ್ಳಿ, ಬೇವಿನಹಳ್ಳಿ, ಚಂದ್ರಗಿರಿ, ಬೂದಗುಂಪಾ, ಗಬ್ಬೂರು, ದನಕನದೊಡ್ಡಿ, ಕೂಕನಪಳ್ಳಿ, ಇಂದರಗಿ, ನಾಗೇಶನಹಳ್ಳಿ, ಗಿಣಿಗೇರಿ, ಮುಕ್ಕುಂಪಿ, ಜಬ್ಬಲಗುಡ್ಡ, ಬಿಳೇಬಾವಿ, ಅಗಳಕೇರಿ, ಹಿಟ್ನಾಳ, ಬಸಾಪಟ್ಟಣ, ಕೊಪ್ಪಳ, ಬನ್ನಿಹಟ್ಟಿ, ಟಿಬಿ ಡ್ಯಾಂ,ಹೆಗ್ಗಡಳ್ಳಿ,ಕಲ್ಲಲಿಂಗನಹಳ್ಳಿ ಮತ್ತು ವಿಠಲಾಪುರ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಇದುವರೆಗೆ 6 ಸಾವಿರಕ್ಕೂ ಅಧಿಕ ಹಾವುಗಳನ್ನು ಹಿಡಿದು ರಕ್ಷಿಸಿದ್ದಾರೆ. ಗಾಯಗೊಂಡ ಹಾವುಗಳನ್ನು ಕಾಡಿಗೆ ಬಿಟ್ಟರೆ ಇರುವೆ ಮುತ್ತಿ, ಸಾವಿಗೀಡಾಗುವ ಸಂಭವ ಇರುವುದರಿಂದ ಅಂತಹ ಹಾವುಗಳಿಗೆ ಮನೆಯಲ್ಲಿಯೇ ಅರಣ್ಯಜೀವಿ ವೈದ್ಯರ ಸಲಹೆಗಳನ್ನು ಪಡೆದು ಉಪಚಾರ ಮಾಡಿ, ಬಳಿಕ ಕಾಡಿಗೆ ಬಿಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ನಾಗರಹಾವು, ಮಂಡಲ ಹಾವು, ಕೇರೆ ಹಾವು, ರಕ್ತ ಮಂಡಲ, ಬ್ಲೈಂಡ್ ಪೆಂಜರಿ, ಭರ್ಚಿ, ಮಿಡಿ ನಾಗರ, ಮಣ್ಣುಕ್ಕ ಹೀಗೆ ಹಲವಾರು ಸರೀಸೃಪಗಳಿಗೆ ಜೀವದಾನ ಮಾಡಿ ಕಾಡಿಗೆ ಬಿಡುವ ಕಾಯಕ ಮಡಿಕೊಂಡಿರುವ ವಸಂತ್ ಅವರ ವನ್ಯಜೀವಿ ಪ್ರೇಮಕ್ಕೆ ಪ್ರಶಸ್ತಿ ಸಂದಿರುವುದು ಖುಷಿ ತಂದಿದೆ ಎಂದು ವಸಂತ್ ಸಂಭ್ರಮಿಸಿದ್ದಾರೆ.

ಹಾವು ಕಂಡ ತಕ್ಷಣ ಯಾರೇ ಮೊಬೈಲ್ ಕರೆ ಮಾಡಿದರೆ ದಿನದ 24ಗಂಟೆಯೂ ವಸಂತ್ ಹಾವುಗಳನ್ನು ಹಿಡಿಯುವಲ್ಲಿ ಸಿದ್ಧರಿದ್ದಾರೆ. ಮನೆ, ಕೊಟ್ಟಿಗೆ, ಗೋಡಾನ್, ಕಚೇರಿ, ಶಾಲೆ, ಕಾಲೇಜು ಆವರಣ, ಹೊಲ, ಗದ್ದೆಗಳಲ್ಲಿ ಹಾವು ಕಂಡರೆ ಕೊಲ್ಲಬೇಡಿ. ನನ್ನ ಈ 96638 33914 ಕರೆ ಮಾಡಿದರೆ ಹಾವುಗಳನ್ನು ಸುರಕ್ಷಿತವಾಗಿ ಹಿಡಿದು ಕಾಡಿಗೆ ಬಿಡುವುದಾಗಿ ವಸಂತ್ ಹೇಳಿದ್ದಾರೆ.

# ಗುರುಗಳಮೇಲಿನ ಪ್ರೀತಿ ವಿಶ್ವಾಸ ಶಾಶ್ವತವಾಗಿರಲಿ: ಶಿವಕುಮಾರಶ್ರೀ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.15: ವಿದ್ಯಾರ್ಥಿಗಳಲ್ಲಿ ಗುರುಗಳ ಮೇಲಿನ ಪ್ರೀತಿ, ವಿಶ್ವಾಸ ಶಾಸ್ವತವಾಗಿರಬೇಕು ಎಂದು ಚಿದಂಬರಾಶ್ರಮ ಶ್ರೀ ಸಿದ್ಧಾರೂಢಮಠ ಬೀದರಿನ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಪ್ರತಿಪಾದಿಸಿದರು.

ತಾಲೂಕಿನ ಚಳಕಾಪೂರಗ್ರಾಮದ ಶ್ರೀ ಸಿದ್ಧಾರೂಢ ಸ್ವಾಮೀಜಿ ಪ್ರೌಢಶಾಲೆಯಲ್ಲಿ, 2002–03ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಳಿಂದ ಆಯೋಜಿಸಿದ್ದ ಗುರುವಂದನಾ–ಸ್ನೇಹಸಮ್ಮೇಳನ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು. ನಾವು ಎಷ್ಟೇ ದೊಡ್ಡವರಾದರೂ ನಮ್ಮನ್ನು ಕಲಿಸಿದ ಗುರುಗಳನ್ನು ಮರೆಯಬಾರದು. ನಮ್ಮನ್ನು ಎತ್ತರಕ್ಕೆ ಬೆಳೆಸಿದವರು ಗುರುಗಳೇ ಆಗಿರುತ್ತಾರೆ ಎಂದು ಹೇಳಿದರು. ಬ್ರಹ್ಮವಿದ್ಯಾಶ್ರಮ ಶ್ರೀ ಸಿದ್ಧಾರೂಢಮಠ ಚಳಕಪಾರೂದ ಶ್ರೀ ಶಂಕರಾನಂದ ಸ್ವಾಮಿಗಳು ಅಧ್ಯಕ್ಷತೆವಹಿಸಿ ಮಾತನಾಡಿದರು.

ಇದೇವೇಳೆ ಹಳೆ ವಿದ್ಯಾರ್ಥಿಗಳ ಸಂಘ ಮತ್ತು ನಿವೃತ್ತ ಶಿಕ್ಷಕರು ಸೇರಿ ಶ್ರೀ ಶಿವಕುಮಾರ ಮಹಾಸ್ವಾಮಿಗಳ ತುಲಾಭಾರ ಸೇವೆ ಸಲ್ಲಿಸಿದರು. ಅಲ್ಲದೇ ಶಾಲೆಯ ನಿವೃತ್ತ ಶಿಕ್ಷಕರಾದ ಎಸ್.ಪಿ.ಸಂಗಳದ, ಲಕ್ಷ ??ಣರಾವ ವಾನಖೆಡೆ, ಮಲ್ಲಿಕಾರ್ಜುನ ಮಠಪತಿ, ಆರ್. ಎಂ.ಭಂಕಲಗಿ, ಕೆ.ಜಿ.ಬಿರಾದಾರ, ಜಿ.ಸಿ.ಗಂಗಶೆಟ್ಟಿಯವರಿಗೆ ಜೊತೆಗೆ ವಿಘ್ನೇಶ್ವರ ಹಿ.ಪ್ರಾ.ಶಾಲೆ ಮತ್ತು ಸರ್ಕಾರಿ ಹಿ.ಪ್ರಾಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಹಳೆಯ ವಿದ್ಯಾರ್ಥಿಗಳಾದ ನಾಗರಾಜ ಮಣಗಿರೆ, ಸುಜಾತಾ ಪಾಂಚಾಳ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಹಣಮಂತರಾವ ಖಂಡ್ರೆ, ಮಾರುತಿ ಬುದಾರೆ, ವಿಜಯಕುಮಾರ ಗಾಯಿ, ಮಹೇಶ ನಾಗಾಳೆ, ಆನಂದ ಚಿನಕೆರೆ, ಸಂದೀಪ ಪಾಟೀಲ, ನರಸಿಂಗ ಕೊಳಾರೆ, ಸಿದ್ರಾಮಪ್ಪ, ಜ್ಞಾನೇಶ್ವರ, ನೀತಾ, ಶರಣಮ್ಮ ಉಪಸ್ಥಿತರಿದ್ದರು.

ನರೇಂದ್ರ ಪಾಟೀಲ ಸ್ವಾಗತಿಸಿದರು. ಶ್ರೀದೇವಿ ಬಗದೂರೆ ನಿರೂಪಿಸಿದರು. ಸಿದ್ರಾಮಪ್ಪ ವಂದಿಸಿದರು.

# ಕುಂದರಗಿಯಲ್ಲಿ ಇಂದು ಜಾನಪದ ಸಂಭ್ರಮ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.15:ಜಿಲ್ಲೆಯ ಬೀಳಗಿ ತಾಲೂಕಿನ ಬೂದಿಹಾಳ (ಎಸ್.ಎಚ್.) ಗ್ರಾಮದಲ್ಲಿ ನಾಳೆ ಜ.16 ರಂದು ಮಧ್ಯಾಹ್ನ 3 ಗಂಟೆಗೆ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ತಾಲೂಕು ಘಟಕ ಬೀಳಗಿ ಇವರ ಸಂಯುಕ್ತ ಆಶ್ರಯದಲ್ಲಿ ಕನ್ನಡ ಜಾನಪದ ಪರಿಷತ್ ವಲಯ ಘಟಕ ಕುಂದರಗಿ ಇದರ ಉದ್ಘಾಟನೆ, ಪದಗ್ರಹಣ, ಜಾನಪದ ಸಂಭ್ರಮ ಕಾರ್ಯಕ್ರಮ ಜರುಗಲಿದೆ.

ಇಂಚಲದ ಡಾ.ಶಿವಾನಂದಭಾರತಿ ಮಹಾಸ್ವಾಮಿಗಳು ದಿವ್ಯಸಾನ್ನಿಧ್ಯ ವಹಿಸುವರು. ಗಾಳೇಶ್ವರ ಮಠದ ಚಿದಾನಂದ ಮಹಾಸ್ವಾಮಿಗಳು ಸಾನ್ನಿಧ್ಯವಹಿಸುವರು. ಕನ್ನಡ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಡಿ. ಎಂ. ಸಾವಕಾರ ಕಾರ್ಯಕ್ರಮ ಉದ್ಘಾಟಿಸುವರು.

ಕನ್ನಡ ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ದಾವಣಗೆರೆ ಅಧ್ಯಕ್ಷತೆ ವಹಿಸುವರು. ಕನ್ನಡ ಜಾನಪದ ಪರಿಷತ್ ಕುಂದರಗಿ ವಲಯ ಘಟಕದ ಅಧ್ಯಕ್ಷರಾಗಿರುವ ಕಲಾವಿದ ಪಾಂಡಪ್ಪ ಕನಸಗೇರಿ ಮತ್ತು ಪದಾಧಿಕಾರಿಗಳು ಪದಗ್ರಹಣ ಮಾಡುವರು. ಹಿರಿಯ ಜಾನಪದ ಕಲಾವಿದರನ್ನು ಸನ್ಮಾನಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಕಾರ್ಯದರ್ಶಿ ಆರ್.ಬಿ.ನಬಿವಾಲೆ, ಭಾರತೀಯ ಕಿಸಾನ ಸಂಘದ ಜಿಲ್ಲಾ ಅಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ, ಕನ್ನಡ ಸಾಹಿತ್ಯ ಪರಿಷತ್ ಕುಂದರಗಿ ವಲಯ ಘಟಕದ ಅಧ್ಯಕ್ಷ ಶಂಕರ ಡಬರಿ ಮತ್ತಿತರರು ಆಗಮಿಸುವರೆಂದು ಪ್ರಕಟಣೆ ತಿಳಿಸಿದೆ.

# ಲಿಂಗಾಯತ ಧರ್ಮೋದಯ ದಿನಾಚರಣೆ.




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: –ಜಗತ್ತಿಗೆ ಪ್ರಜಾಪ್ರಭುತ್ವ ಮೊದಲು ಕೊಟ್ಟಿದ್ದು ಕಲ್ಯಾಣ ನಾಡು, ಪ್ರಪಂಚಕ್ಕೆ ಮಾನವೀಯ ತತ್ವಗಳನ್ನು ಪರಿಚಯಿಸಿದ್ದು ಲಿಂಗಾಯತ ಧರ್ಮ. ಬಸವಣ್ಣನವರು 900 ವರ್ಷಗಳ ಹಿಂದೆಯೇ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿದರು ಎಂದು ಬಸವ ಮಹಾಮನೆ ಸಂಸ್ಥೆಯ ಪೂಜ್ಯ ಡಾ. ಸಿದ್ಧರಾಮ ಶರಣ–ರು ಬೆಲ್ದಾಳ ನುಡಿದರು. ಅಂರ್ರಾಷ್ಟ್ರೀಯ ಲಿಂಗಾಯತ ಧರ್ಮ ಕೇಂದ್ರ ವತಿಯಿಂದ ಇಲ್ಲಿನ ಹರಳಯ್ಯನವರ ಗವಿಯಲ್ಲಿ ನಡೆದ ಲಿಂಗಾಯತ ಧರ್ಮೋದಯ ದಿನಾಚರಣೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಮಾತನಾಡಿ, ಲಿಂಗಾಯತ ಪದ ಶ್ರೇಷ್ಠ ಅರ್ಥವುಳ್ಳದ್ದು ಕಾಯಕ ವನ್ನು ಶುದ್ಧ ಮಾಡಿಕೊಂಡು, ಅಂಗದ ಮೇಲೆ ಇಷ್ಟಲಿಂಗವನ್ನು ದೀಕ್ಷೆಯಿಂದ ಅಳವಡಿಸುವುದು ಮತ್ತು ಅಂತರಂಗಕ್ಕೆ ಮಂತ್ರದಿಂದ ಪ್ರಾಣಲಿಂಗ ಸಂಬಂಧಿಸುವುದು. ಸದಾಚಾರಕ್ಕೆ ಮೂಲ ಇಷ್ಟಲಿಂಗ. ಇದರ ಧಾರಣೆಯಿಂದ ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗಿ ಸದಾಚಾರಗಳೆನಿಸುವುದು ವಚನಗಳು, ಪಂಚಾಚಾರ, ಷಟಸ್ಥಲಗಳು ಲಿಂಗಾಯತರ ಆಚರಣೆಗಳಾಗಿವೆ ಎಂದರು.

ಹರಳಯ್ಯ ಗವಿಯ ಪೂಜ್ಯ ಡಾ. ಗಂಗಾಂಬಿಕಾ ಅಕ್ಕ ನೇತೃತ್ವ ವಹಿಸಿ ಮಾತನಾಡಿ, ಲಿಂಗಾಯತ ಧರ್ಮ ವೈಜ್ಞಾನಿಕ ವೈಚಾರಿಕ ಮಾನವ ಆಧಾರಿತ ಧರ್ಮವಾಗಿದೆ. ಶೂನ್ಯ ಸ್ವರೂಪಿ ಪರಮಾತ್ಮ ಎಲ್ಲರ ಅಂತರಂಗದಲ್ಲಿ ಇದ್ದಾನೆ. ಅದಕ್ಕೆ ನಿನ್ನೊಳಗಿನ ಶಕ್ತಿ ನಿನ್ನ ಪರಮಾತ್ಮ ಅದನ್ನು ನೀನು ಆರಾಧಿಸಬೇಕು ಎಂದು ಬಸವಣ್ಣನವರು ಇಷ್ಟಲಿಂಗ ನೀಡಿದ್ದಾರೆ. ಇದು ಬಸವಣ್ಣನವರಿಗೆ ಇಂದು ಆವಿಷ್ಕಾರವಾಗಿದೆ. ಲಿಂಗಾಯತ ಧರ್ಮ ಪ್ರಕೃತಿ ಧರ್ಮ, ಸೃಷ್ಟಿಯ ಮೂಲಕಾರಕಗಳನ್ನು ಅಂಗೀಕರಿಸಿಕೊಂಡು ಹುಟ್ಟಿದ ಧರ್ಮವಾಗಿದ್ದು, ಸೃಷ್ಟಿಯ ಎಲ್ಲಾ ಮೌಲ್ಯಗಳು, ಗುಣಗಳು ಹೊತ್ತುಕೊಂಡು ಬಂದ ಧರ್ಮವಾಗಿದೆ ಎಂದರು.

ಅಕ್ಕಮಹಾದೇವಿಯ ಗವಿಯ ಪೂಜ್ಯ ಸತ್ಯಕ್ಕತಾಯಿ ವಚನ ಪಠಣ ಮಾಡಿಸಿದರು. ಶ್ರೀ ಬಸವೇಶ್ವರ ದೇವಸ್ಥಾನ ಪಂಚಕಮಿಟಿ ನಿರ್ದೇಶಕರಾದ ರೇವಣಪ್ಪಾ ರಾಯವಾಡೆ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಶ್ರೀ ಬಸವೇಶ್ವರ ಹಿರಿಯ ನಾಗರಿಕರ ಒಕ್ಕೂಟದ ಜಂಟಿಕಾರ್ಯದರ್ಶಿ ಈಶ್ವರ ಶೀಲವಂತ, ಮೇದಾರ ಕೇತಯ್ಯ ಸಮಾಜದ ಗಾಯತ್ರಿ ಟೀಚರ್. ಹರಳಯ್ಯ ಸಮಾಜದ ನಾಮದೇವ ಸೂರ್ಯವಂಶಿ ಧ್ವಜಾರೋಹಣಗೈದರು. ನಿವೃತ್ತ ನ್ಯಾಯಾಧೀಶ ಸುಭಾಶ್ಚಂದ್ರ ನಾಗರಾಳೆ. ಕಾಶಪ್ಪಾ ಬಾಲಿಕಿಲೆ, ಶ್ರೀಶೈಲ ಹುಡೇದ, ಶಂಕರ ಕರಣೆ, ಜೈಪ್ರಕಾಶ ಸದಾನಂದೆ. ಎಸ್. ಜಿ. ಕರುಣೆ. ರಾಜಶೇಖರ ಬಿರಾದಾರ. ರಾಣಿ ವಡ್ಡೆ. ಹಾಗೂ ನಾಗಪ್ಪ ನಿಣ್ಣೆ, ಮೀನಾಕ್ಷಿ ಬಿರಾದರ, ಗುರುಪಾದಪ್ಪ ಪಾಟೀಲ್, ಜಯಪ್ರಕಾಶ್ ಸದಾನಂದೆ, ಸುಲೋಚನಾ ಮಾಮಾ, ವಿದ್ಯಾವತಿ ಶೇರಿಕಾರ, ಶಿವರಾಜ ನೀಲಕಂಠೆ, ಮಂಗಲಾ ಪಾಟೀಲ, ಗಣಪತಿ ಕಾಸ್ತೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರಾಷ್ಟ್ರೀಯ ಯ ಬಸವದಳದ ಅಧ್ಯಕ್ಷ ರವಿಂದ್ರ ಕೊಳಕೂರ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಸಂಗಮೇಶ ತೋಗರಖೇಡೆ ನಿರೂಪಿಸಿದರು. ಅಕ್ಕನ ಬಳಗದ ಶರಣೆ–ಯರಿಂದ ಸಿದ್ಧರಾಮೇಶ್ವರರರ ತ್ರಿವಿಧಿಗಳನ್ನು ಪಠಿಸಲಾಯಿತು. ಇದೇ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ನಡೆಯಲಿರುವ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಪೂಜ್ಯ ಡಾ. ಸಿದ್ಧರಾಮ ಶರಣರು ಬೆಲ್ದಾಳ ಅವರನ್ನು ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

# ಸಾರಿಗೆ ದರ ಹೆಚ್ಚಳ – ಬಳ್ಳಾರಿಯಲ್ಲಿ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಕರ್ನಾಟಕ ಸರ್ಕಾರ ಸಾರಿಗೆ ಇಲಾಖೆ ದರವನ್ನು ಏರಿಕೆ ಮಾಡಿರುವ ಕ್ರಮವನ್ನು ವಿರೋಧಿಸಿ ಸಿಪಿಎಂ ಪಕ್ಷ ಬಳ್ಳಾರಿ ತಾಲೂಕಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ನಾಲ್ಕು ಸಾರಿಗೆ ನಿಯಮಗಳ ವ್ಯಾಪ್ತಿಯಲ್ಲಿ ಪ್ರಯಾಣಿಕರ ಸಾರಿಗೆ ದರಗಳು ಶೇಕಡ 15 ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಸಿಪಿಎಂ ಖಂಡಿಸುತ್ತದೆ ಎಂದು ಮುಖಂಡರು ತಿಳಿಸಿದ್ದಾರೆ. ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದ್ದ ಹಿನ್ನೆಲೆಯಲ್ಲಿ ಇಂದು ಬೀದಿಗಿಳಿದ ಸಿಪಿಎಂ, ಡೀಸೆಲ್ ದರಗಳು ಹೆಚ್ಚಲು ಮತ್ತು ಸಿಬ್ಬಂದಿ ವೆಚ್ಚ ಹೆಚ್ಚಳದ ನೆಪದಲ್ಲಿ ದರ ಏರಿಕೆ ಮಾಡಿರುವುದು ಪ್ರಜಾಸತ್ತಾತ್ಮಕ ಮತ್ತು ಅವೈಜ್ಞಾನಿಕವಾಗದೆ. ಇದು ಸಾಮಾನ್ಯ ಜನರ ವಿರೋಧಿ ಯಾಗಿದೆ. ಡೀಸೆಲ್ ಹೆಚ್ಚಳವಾಗಿದೆ ಎನ್ನುವ ಸರ್ಕಾರ ಡೀಸೆಲ್ ದರ ಇಳಿದಾಗ ದರಗಳನ್ನು ಎಂದಾದರೂ ಕಡಮೆ ಮಾಡಿದೆಯೇ? ಎಂದು ಪ್ರಶ್ನಿಸಿ ಸರ್ಕಾರದ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ಅದಕ್ಕಿಂತ ಮುಖ್ಯ ವಾಗಿ ಸಾರ್ವಜನಿಕ ಸಾರಿಗೆಯ ಡೀಸೆಲ್ ದರಗಳುನ್ನು ಕಡಿಮೆ ಇಡಬೇಕಾದ್ದು ಸರ್ಕಾರದ ಜವಾಬ್ದಾರಿ. ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವೂ ಮುಕ್ತ ಮಾರುಕಟ್ಟೆ ದರಗಳಿಗಿಂತ ದುಬಾರಿಯಾಗಿದೆ. ಸರ್ಕಾರಕ್ಕೆ ನಿಜಕ್ಕೂ ವೆಚ್ಚವನ್ನು ಕಡಿಮೆ ಮಾಡಬೇಕೆಂದಿದ್ದರೆ ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವನ್ನು ಸಬ್ಸಿಡಿ ದರದಲ್ಲಿ ಪೂರೈಸಬೇಕು. ಮುಕ್ತ ಮಾರುಕಟ್ಟೆ ದರಗಳಲ್ಲಾದರೂ ಪೂರೈಸಬೆಕು. ಆದ್ದರಿಂದ ಶೇಕಡಾ 15 ರ ದರ ಹೆಚ್ಚಳಕ್ಕೆ ಡೀಸೆಲ್ ದರ ಹೆಚ್ಚಳ ಕಾರಣ ಎನ್ನುವುದು ಸುಳ್ಳು ನೆಪವಾಗಿದೆ ಎಂದು ಸಿಪಿಎಂ ನಾಯಕ ಜೆ.ಸತ್ಯಬಾಬು ಹೇಳಿದ್ದಾರೆ. ಸಿಬ್ಬಂದಿ ವೆಚ್ಚಹೆಚ್ಚಳ ವಾಗಿರು ವುದು ಮತ್ತೊಂದು ಕಾರಣವೆನ್ನಲಾಗಿದೆ. ನಾಲ್ಕು ನಿಗಮಗಳಲ್ಲಿ ಸಿಬ್ಬಂದಿಗೆ 3 ವರ್ಷಗಳ ವೇತನ ಬಾಕಿ ಮೊತ್ತ ನೀಡಿ ಹೊಸ ವೇತನ ಒಪ್ಪಂದ ಜಾರಿ ಮಾಡಬೇಕಿದೆ. 1950 ರ ಕಾಯ್ದೆ ಪ್ರಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಸರ್ಕಾರ ಬಜೆಟ್ ಬೆಂಬಲ ನಿಡುವುದು ಅಗತ್ಯ. ಸಾರ್ವಜನಿಕರ ಹಿತ ದೃಷ್ಟಿಯಿಂದ ಒದಗಿಸುವ ಸಾರಿಗೆಯನ್ನು ಲಾಭ ನಷ್ಟದ ಲೆಕ್ಕ ದಲ್ಲಿ ನೋಡಬಾರದು. ನಷ್ಟ ಉಂಟಾದಲ್ಲಿ ಸರ್ಕಾರ ಅದನ್ನು ಭರಿಸಬೇಕು. ಸಾರ್ವಜನಿಕ ಸಾರಿಗೆಗಳು ಎಲ್ಲಾ ಸಂದರ್ಭದಲ್ಲಿ ಲಾಭವನ್ನು ತರಲು ಆಗುವುದಿಲ್ಲ. ಸಾರಿಗೆ ನಿಗಮಗಳು ಅರ್ಧದಷ್ಟು ಮಾರ್ಗ ಕಾರ್ಯಾಚರಣೆಗಳು ಗ್ರಾಮಾಂತರದಲ್ಲಿ ಇರುವುದಿರಂದ ಸಹಜವಾಗಿಯೇ ನಷ್ಟಹೊಂದಿತ್ತದೆ. ಜನರ ಹಿತದೃಷ್ಟಿಯಿಂದ ಸರ್ಕಾರ ಅದನ್ನು ಭರಿಸಬೇಕು. ಅದರ ಬದಲಿಗೆ ಬೆಳೆ ಹೆಚ್ಚಳ ಮಾಡುವುದು ಜನ ವಿರೋಧಿ ಕ್ರಮವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಪ್ರತಿಭಟನೆಯಲ್ಲಿ ಸಿಪಿಎಂ ಕಾರ್ಯದರ್ಶಿ ಜೆ ಚಂದ್ರಕುಮಾರಿ, ಎಂ ತಿಪ್ಪೇಸ್ವಾಮಿ ಜಿಲ್ಲಾಸಮಿತಿ ಸಾಟಧಸ್ವಾರು, ತಿಪ್ಪೇರುದ್ರ ಎ, ಜಿ ಎನ್ ಯರಿಸ್ವಾಮಿ, ಜಿ ಎಸ್ ಮೂರ್ತಿ, ಈರಮ್ಮ, ಶಿಲ್ಪಾ, ಬೈಲ ಹನುಮಂತ, ಹೇಮಾವತಿ, ಗಂಗಣ್ಣ ಪತ್ತಾರ್, ರಾಮು, ವಿಜ್ಜೆಶ್ ಮುಂತಾದವರು ಇದ್ದರು.

## ಸಾರ್ವಜನಿಕರ ಅನುಕೂಲಕ್ಕೆ ಜಾತ್ರೆಯಲ್ಲಿ ಉಕ್ಕಡ ಪೊಲೀಸ್ ಠಾಣೆ : ಸೈಬರ್ ಕ್ರೈಂ ಜಾಗೃತಿ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಯಿಂದ ಜಾತ್ರೆಯಲ್ಲಿ ಉಕ್ಕಡ ಪೊಲೀಸ್ ಠಾಣೆಯನ್ನು (ಔಟ್ ಪೋಸ್ಟ್) ಬುಧವಾರ ತೆರೆಯಲಾಯಿತು.

ಜಾತ್ರೆಯಲ್ಲಿ ತೆರೆಯಲಾದ ಉಕ್ಕಡ ಪೊಲೀಸ್ ಠಾಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ ಅವರು ಉದ್ಘಾಟಿಸಿದರು.

ಸೈಬರ್ ಕ್ರೈಂ ಬಗ್ಗೆ ಜಾಗೃತಿ: ಇತ್ತೀಚೆಗೆ ಸೈಬರ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕೊಪ್ಪಳ ಜಿಲ್ಲಾ ಪೊಲೀಸ್ ಹಾಗೂ ಸೈಬರ್, ಕೊಪ್ಪಳದ ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆಯು ಮುಂದಾಗಿದ್ದು, ಜಾತ್ರೆಯ ಉಕ್ಕಡ ಪೊಲೀಸ್ ಠಾಣೆ–ಯ ಮುಂಭಾಗದಲ್ಲಿ 'ನನಗೆ ಸೈಬರ್ ಕ್ರೈಂ ಜಾಗೃತಿ ಇದೆ ನಾನು ಸೈಬರ್ ಮೋಸಕ್ಕೆ ಒಳಗಾಗುವುದಿಲ್ಲ' ಮತ್ತು ನೀವು ಸೈಬರ್ ಅಪರಾಧಕ್ಕೆ ಒಳಗಾಗಿದ್ದರೆ, ತಕ್ಷಣ 24*7 ಸಹಾಯವಾಣಿ ಸಂ–ಖ್ಯೆ 1930 ಗೆ ಕರೆ ಮಾಡಿ' ಎಂಬ ಸಂದೇಶವಿರುವ ಸೆಲ್ಫಿ ಪಾಯಿಂಟ್ ನಿರ್ಮಿಸಿ ಅರಿವು ಮೂಡಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಹೇಮಂತ ಕುಮಾರ, ಕೊಪ್ಪಳ ಡಿವೈಎಸ್ಪಿ ಮುತ್ತಣ್ಣ ಸವರಗೋಳ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಅವಮಾನ ಮಾಡಿದ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆಯಾಗಲಿ : ಪಿಂಟು ಕಾಂಬಳೆ.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :–ಬಸವಣ್ಣನವರ ಪುತ್ಥಳಿಗೆ ಅವಮಾನ ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಮಾನವ ಬಂಧುತ್ವ ವೇದಿಕೆಯ ತಾಲೂಕಾ ಅಧ್ಯಕ್ಷರಾದ ಪಿಂಟು ಕಾಂಬಳೆ ಒತ್ತಾಯಿಸಿದ್ದಾರೆ.

ಭಾಲ್ಕಿ ತಾಲೂಕಿನ ದಾಡಗಿ ಕ್ರಾಸ್ ಬಳಿಯ ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಕೆಲವು ಕಿಡಿಗೇಡಿಗಳು ಅವಮಾನ ಮಾಡಿರುವ ಘಟನೆ ನಡೆದಿದೆ. ಮಂಗಳವಾರ ತಡ ರಾತ್ರಿಯ ಸಮಯದಲ್ಲಿ ಕಿಡಿಗೇಡಿಗಳು ಬಸವಣ್ಣನವರ ಪುತ್ಥಳಿಯ ಕೈ ಮುರಿದು ಧ್ವಜ ಸ್ತಂಭ ಕಿತ್ತೆಸೆಯಲು ಪ್ರಯತ್ನಿಸಿದ್ದಾರೆ ಎಂದು ಹೇಳಲಾಗಿದೆ. 12ನೇ ಶತಮಾನದಲ್ಲಿಯೇ ಸಮಾನತೆಯ ತತ್ವವನ್ನು ವಿಶ್ವ–ಕ್ಕೆ ಪ್ರತಿಪಾದಿಸಿದ ವಿಶ್ವಗುರು ಮಹಾತ್ಮ ಬಸವಣ್ಣನವರಿಗೆ ಮಾಡಿದ ಅವಮಾನ ಮಾತ್ರವಲ್ಲ, ಇಡೀ ದೇಶಕ್ಕೆ ಮಾಡಿದ ಅವಮಾನವಾಗಿದೆ.



ಈ ಘಟನೆಯನ್ನು ಮಾನವ ಬಂಧುತ್ವ ವೇದಿಕೆ ತಾಲೂಕಾ ಘಟಕವು ತೀವ್ರವಾಗಿ ಖಂಡಿಸುತ್ತದೆ. ಕೆಲ ಪಟ್ಟಭದ್ರ ಹಿತಾಸಕ್ತಿ ಗುಂಪುಗಳು ಮತ್ತು ಕಿಡಿಗೇಡಿಗಳು ಪದೇ ಪದೇ ಮಹಾತ್ಮರ ಪುತ್ಥಳಿಗಳಿಗೆ ಅವಮಾನಿಸಿ, ಸಮಾಜದಲ್ಲಿ ಅಶಾಂತಿ ಸಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಇಂತಹ ದುಷ್ಟ ಶಕ್ತಿಗಳಿಗೆ ಸರ್ಕಾರ ತಕ್ಷಣ ಕಡಿವಾಣ ಹಾಕಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಮಹಾತ್ಮರ ಪ್ರತಿಮೆಗಳಿಗೆ ಸೂಕ್ತ ರಕ್ಷಣೆ ನೀಡಬೇಕು. ವಿಶ್ವಗುರು ಮಹಾತ್ಮ ಬಸವೇಶ್ವರರ ಪುತ್ಥಳಿಗೆ ಅವಮಾನಿಸಿದ ಕಿಡಿಗೇಡಿಗಳನ್ನು ಪೋಲಿಸ್ ಇಲಾಖೆಯು ಕೂಡಲೇ ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕೆಂದು ಮಾನವ ಬಂಧುತ್ವ ವೇದಿಕೆಯ ಬಸವಕಲ್ಯಾಣ ತಾಲೂಕಾ ಸಂಚಾಲಕರಾದ ಪಿಂಟು ಕಾಂಬಳೆ ಒತ್ತಾಯಿಸಿದ್ದಾರೆ.



ಚಿಟಗುಪ್ಪ:– ಪಟ್ಟಣದ ಪ್ರಸಿದ್ಧವಾದ ಸಲಾರೆ ಮಗದುಮ್ ದರ್ಗಾ ಜಾತ್ರೆಯು ಜನವರಿ 16 ರಿಂದ 19ರ ವರೆಗೆ ನಡೆಯುವ ಜಾತ್ರೆಯ ನಿಮಿತ್ಯ ಇಲ್ಲಿಯ ಪೊಲೀಸ್ ಠಾಣೆಯ ಆವರಣದಲ್ಲಿ ಪಿಎಸ್ಐ ಬಾಷುಮಿಯಾ ಕೊಂಚೂರ್ ಅವರ ಅಧ್ಯಕ್ಷತೆಯಲ್ಲಿ ಶಾಂತಿ ಸಭೆ ಜರುಗಿತ್ತು. ಈ ಸಂದರ್ಭದಲ್ಲಿ ಪಟ್ಟಣದ ಪ್ರಮುಖರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಶೃಂಗೇರಿ ಜಗದುರುಗಳ ಆಗಮನ ವಿವಿಧ ಸಮಿತಿಗಳ ಸಿದ್ಧತೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಇದೇ ಜ.19, 20 ಮತ್ತು 21 ರಂದು ಸಂಗನಕಲ್ಲು ರಸ್ತೆಯ ಶ್ರೀ ಶೃಂಗೇರಿ ಶಾರದಾ ಶಂಕರ ಮಠದಲ್ಲಿ ಭಾರತೀತೀರ್ಥ ಸಭಾ ಭವನ ಉದ್ಘಾಟನೆ ಸೇರಿದಂತೆ ಹಲವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವ ಹಿನ್ನೆಲೆಯಲ್ಲಿ ಶೃಂಗೇರಿ ಜಗದ್ಗುರುಗಳು ಬಳ್ಳಾರಿಗೆ ಆಗಮಿಸಲಿದ್ದು ಇದಕ್ಕಾಗಿ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಸಂಗನಕಲ್ಲು ರಸ್ತೆಯ ಶೃಂಗೇರಿ ಶಾರದಾ ಶಂಕರ ಮಠದ ಸಂಚಾಲಕರಾದ ಬಿ.ಕೆ.ಬಿ.ಎನ್. ಮೂರ್ತಿ ಅವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ವಿವಿಧ ಸಮಿತಿಗಳ ರೂವಾರಿಗಳು ತಾವು ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಮಾಹಿತಿ ನೀಡಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸಾಧಕ, ಬಾಧಕಗಳನ್ನು ಸಭೆಯ ಗಮನಕ್ಕೆ ತಂದರು.

ಹಿರಿಯ ವಕೀಲರಾದ ವೈ. ರಂಗನಾಥರಾವ್ ಅವರು ಮಾತನಾಡಿ ಕಿರ್ಲೋಸ್ಕರ್, ಜಿಂದಾಲ್ ಸೇರಿದಂತೆ ಹಲವು ಉದ್ಯಮಗಳು ಮತ್ತು ಕೈಗಾರಿಕೆಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು ಗಣ್ಯಮಾನ್ಯರು ಶೃಂಗೇರಿ ಜಗದ್ಗುರುಗಳ ದರ್ಶನಕ್ಕೆ ಬರಲಿದ್ದು ಸಮಿತಿಯು ಸಮಯ ಪಾಲನೆಯ ಜೊತೆಗೆ ಶ್ರೀಗಳ ಭೇಟಿಗೆ ಅನುವು ಮಾಡಿಕೊಡಬೇಕು ಎಂದರು.

ವಕೀಲರಾದ ಮೃತ್ಯುಂಜಯ ಬಂಡ್ರಾಳ್ ಇವರು ಮಾತನಾಡಿ, ಮಠಕ್ಕೆ ಬರುವ ಭಕ್ತರಿಗೆ ಪಾರ್ಕಿಂ–ಗ್ ವ್ಯವಸ್ಥೆ ಮಾಡಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಕಾರುಗಳ ಪಾರ್ಕಿಂಗ್ ಮತ್ತು ಮೋಟಾರ್ ಬೈಕ್‌ಗಳ ಪಾರ್ಕಿಂಗ್‌ಗಾಗಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರಕಾಶ್ ರಾವ್ ಗಡೇಕಲ್ ಅವರು ಭೋಜನ ಸಮಿತಿಯ ನಿರ್ವಹಣೆ ಮಾಡುತ್ತಿದ್ದು 3 ದಿನ ನಡೆಯುವ ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸುಮಾರು 20 ಸಾವಿರಕ್ಕೂ ಅಧಿಕ ಜನರು ಬರುವ ನಿರೀಕ್ಷೆ ಇದೆ. ಭೋಜನಾಲಯದಲ್ಲಿ ಅಗತ್ಯ ಸಿದ್ಧತೆ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿದರು.

ಅರುಣಾ ಮಂಜು, ಮಠದ ಆವರಣವೆಲ್ಲ ವಿದ್ಯುತ್ ಅಲಂಕಾರ, ನಾಲ್ಕು ಬೃಹತ್ ಎಲ್.ಇ.ಡಿ.ಗಳ ಅಳವಡಿಕೆ ಜೊತೆಗೆ ಸಮಾರಂಭದ ವೇದಿಕೆಯ ಸೌಂಡ್ ಸಿಸ್ಟಮ್ ನಿರ್ವಹಣೆ ಮಾಡುವ ಬಗ್ಗೆ ಮಾಹಿತಿ ನೀಡಿದರು.

ಮಹಾನಗರ ಪಾಲಿಕೆ ಸದಸ್ಯ ಕೆ.ಎಸ್.ಅಶೋಕ್ ಅವರು ಮಾತನಾಡಿ, ಗುರುಗಳ ಶೋಭಾ ಯಾತ್ರೆಯ ವೇಳೆ ಪಾಲ್ಗೊಳ್ಳುವ ಎಲ್ಲ ಭಕ್ತರಿಗೆ ಕೆಆರ್‌ಎಸ್ ಫಂಕ್ಷನ್ ಹಾಲ್ ನಿಂದ ಮಠದವರೆಗೆ ನಿರ್ವಹಣೆ, ಮಠದ ಆವರಣದಲ್ಲಿ ಸ್ವಚ್ಛತೆ ಇತ್ಯಾದಿ ಸೇವೆ ಸಲ್ಲಿಸುವ ಕುರಿತು ಮಾಹಿತಿ ನೀಡಿದರು.

ಈ ಸಭೆಯಲ್ಲಿ ಶ್ರೀಮಠದ ಪದಾಧಿಕಾರಿಗಳಾದ ಜೆ.ಮೋಹನ್ ಶಾಸ್ತ್ರಿ, ಕೆ.ರವಿ ಶಾಸ್ತ್ರಿ, ವಿ.ಮುರಳಿ, ರಘುನಂದನ್, ಶ್ರೀಧರ್, ರಘುನಾಥರಾವ್, ನಾಗರಾಜ್, ಹರಿಪ್ರಸಾದ್, ನಟರಾಜ್, ವಿಜಯಲಕ್ಷ್ಮಿ ಕರೂರು ಸೇರಿದಂತೆ ಹಲವು ಭಕ್ತಾದಿಗಳು ಇದ್ದರು.




ಬಳ್ಳಾರಿ ಜಿಲ್ಲಾ ಚೆನ್ನ ದಾಸರ ಸಂಘದ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಮತ್ತು ವಿವಿಧ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಚೆನ್ನ ದಾಸರ ಸಮುದಾಯದ ನೌಕರರಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಸಮುದಾಯದ ಹಿರಿಯ ಮುಖಂಡರು, ಯುವಕರು, ಸಂಘದ ಪದಾಧಿಕಾರಿಗಳು, ಸಮುದಾಯದ ಬಂಧುಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. (ಮಲ್ಲಮ್ಮ ನುಡಿ ಚಿತ್ರ)

# ವಿಶೇಷ ಚೇತನರಿಗೆ ಉಚಿತ ಬಸ್ ಪಾಸ್ ಒದಗಿಸಲು ಮನವಿ




ಬಳ್ಳಾರಿ: ವಿಕಲಚೇತನರಿಗೆ ರಾಜ್ಯದಾದ್ಯಂತ ಸಂಚರಿಸಲು ಬಸ್ ಪಾಸ್ ಸೌಲಭ್ಯ ಒದಗಿಸಬೇಕೆಂದು ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪೋಷಕರ ಸಮಿತಿ ಸಂಸದರು ಮತ್ತು ಶಾಸಕರಲ್ಲಿ ಮನವಿ ಮಾಡಿದೆ.

ಕುಮಾರ್ ನೇತೃತ್ವದ ವಿಕಲಚೇತನರ ನಿಯೋಗವು ಲೋಕಸಭಾ ಸದಸ್ಯ ಇ.ತುಕಾರಾಂ ಮತ್ತು ಸಂಡೂರು ಕ್ಷೇತ್ರದ ಶಾಸಕಿ ಅನ್ನಪೂರ್ಣ ಇ.ತುಕಾರಾಂ ಅವರನ್ನು ಭೇಟಿಯಾಗಿ ವಿಕಲಚೇತನರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸರ್ಕಾರದಿಂದ ಲಭಿಸಬೇಕಾದ ಸಮಸ್ಯೆಗಳ ಅಹವಾಲುಗಳನ್ನು ಸಲ್ಲಿಸಿದರು.

ಪಿಂಚಣಿ ಹೆಚ್ಚಳ, ಉದ್ಯೋಗಾವಕಾಸ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒದಗಿಸಿಕೊಡಬೇಕೆಂದು ಮನವಿ ಮಾಡಿದರು. ಈ ವೇಳೆ ಸಮಿತಿಯ ಪದಾಧಿಕಾರಿಗಳು ಮತ್ತು ವಿಶೇಷ ಚೇತನ ಮುಖಂಡರು ಇದ್ದರು.

### ಸ್ವಾಮಿ ವಿವೇಕಾನಂದರು ಮನುಕುಲ ಉದ್ಧಾರಕರು

# ಜ್ಯೋತಿರ್ಮಯಾನಂದ ಸ್ವಾಮಿಜೀ...




**ಮಲ್ಲಮ್ಮ ನುಡಿ ವಾರ್ತೆ**

ಬೀದರ:ಸ್ವಾಮಿ ವಿವೇಕಾನಂದರು ದೀನ,ದಲಿತ,ದುರ್ಬಲ,ಬಡವರ ಪಾಲಿನ ದೇವರು. ದರಿದ್ರ ದೇವೋಭವ ಎಂದವರು . ತಮ್ಮ ವಿದ್ಯುತ್ ಭರಿತ ವಾಣಿಯಿಂದ ನಿಸ್ತೇಜಕರನ್ನು ಬಡಿದೆಬ್ಬಿಸಿದರು.

ಮುನುಕುಲಉದ್ಧಾರಕ್ಕಾಗಿತಮ್ಮನ್ನು ತಾವುಸಮರ್ಪಿಸಿಕೊಂಡವರುಎಂದು ಜ್ಯೋತಿರ್ಮಯಾನಂದಸ್ವಾಮಿಜಿ ಅವರು ನುಡಿದರು . ನಗರದ ಸಿದ್ಧಾರೂಢಮಠ' ಎದುರುಗಡೆ ಇರುವ ವಿವೇಕಾನಂದ ಬಡಾವಣೆ ಉದ್ಯಾನದಲ್ಲಿ ಆಯೋಜಿಸಿದ ಸ್ವಾಮಿ ವಿವೇಕಾನಂದರ 162ನೇ ಜಯಂತಿ (ರಾಷ್ಟ್ರೀಯ ಯುವ ದಿನ) ಆಚರಣೆ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದರು. ಗುರುನಾಥ ಜಾಂತಿಕರ್ ಅಧ್ಯಕ್ಷರು ಕರ್ನಾಟಕ ರಾಜ್ಯ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಸ್ವಾಮಿ ವಿವೇಕಾನಂದರು ತಮ್ಮ ಬರವಣಿಗೆಹಾಗುವಾಕ್ಚಾರ್ಯದಿಂದ ಯುವಕರನ್ನು ಬಿಡದೆಬ್ಬಿಸಿದರು. ಅವರಜಯಂತಿಯನ್ನುರಾಷ್ಟ್ರೀಯ ಯುವ ದಿನಾಚರಣೆ ಎಂದು ಭಾರತಾದ್ಯಂತಆಚರಿಸಲಾಗುತ್ತದೆಂದು ನುಡಿದರು. ನಗರಸಭೆ ಸದಸ್ಯರಾದ ರಾಜಾರಾಮ ಚಿಟ್ಟಾ ಅವರು ಮುಖ್ಯಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತ ವಿವೇಕಾನಂದ ಉದ್ಯಾನ ಅಭಿವೃದ್ಧಿಗಾಗಿ ರೂ. 50 ಲಕ್ಷ ಮಂಜೂರಾಗಿದೆ ಕೂಡಲೇ ಅಭಿವೃದ್ಧಿಕಾರ್ಯ ಕೈಗೊಳ್ಳಲಾಗುವುದು ಎಂದು ನುಡಿದರು. ಪ್ರೊ. ಎಸ್.ವಿ.ಕಲ್ಮಠ ಅವರು ಪ್ರಾಸ್ತಾವಿಕ ಮಾತನಾಡುತ್ತ 12 ವರ್ಷಗಳ ಹಿಂದೆ–ಯ ಎನ್.ಜಿ.ಓ ಲೇಔಟಗೆ ವಿವೇಕಾನಂದ ಕಾಲೋನಿ ಎಂದು ಹೆಸರಿಡಲಾಗಿ ಬಡಾವಣೆಯು ಸರ್ವಜನಾಂಗದ ಶಾಂತಿಯ ತೋಟವಾಗಿದೆ .

ಎಲ್ಲಾಜಾತಿ,ವರ್ಗದವರುಪರಸ್ಪರ ಪ್ರೀತಿ,ಸ್ನೇಹಸೌಹಾರ್ದತೆಯಿಂದ ಕೂಡಿದವರಾಗಿದ್ದಾರೆಂದರು. ಸಂಜುಕುಮಾರ ಸಜ್ಜನ ಅಧ್ಯಕ್ಷತೆ ವಹಿಸಿದರು. ಡಾ. ಶರಣಪ್ಪ ಮಲಗೊಂಡ ಸ್ವಾಗತಿಸಿದರು. ಶಿವಪುತ್ರಪಾಟೀಲನಿರೂಪಿಸಿದರು. ಮಲ್ಲಿನಾಥಸಜ್ಜನಶೆಟ್ಟಿವಂದಿಸಿದರು. ಚಿ. ಸಿದ್ಧಾಂತ ವಿವೇಕಾನಂದ ವೇಷದಲ್ಲಿ ಆಗಮಿಸಿ ವಿವೇಕಾನಂದರ ಸಂದೇಶ ಹೇಳಿದರು. ಶ್ರೀಮತಿ ಶಾಂಭವಿ ಪ್ರಾರ್ಥನಾಗೀತೆಹಾಡಿದರು.ಸಾಧಕರ ಸನ್ಮಾನ – ಸೂರ್ಯಕಾಂತ ಮಾಳಗೆ,ಶಿವರಾಜ ವೈಜಂಪಾಡ, ಶಿವಪುತ್ರ ಪಾಟೀಲ, ದಿಲೀಪ ಹುಲಸೂರೆ,ಶರಣಪ್ಪಮಲಗೊಂಡ, ರಾಮಣ್ಣ ಗೊಂಡ, ಮಲ್ಲಿನಾಥ ಸಜ್ಜನ ಹಾಗು ಶಶಿಕಾಂತ ಶೆಂಬೆಳ್ಳಿ ಸಾಧಕರಿಗೆ ಸನ್ಮಾನಿಸಲಾಯಿತು. ವಿಠಲ ಪಂಚಾಳ,ಶಿವರಾಜ ವೈಜಂಪಾಡ ಹಾಗು ನಾಗನಾಥ ಬರಶೆಟ್ಟಿ ಕಾರ್ಯಕ್ರಮ ಸಂಯೋಜಿಸಿದರು.ಬಡಾವಣೆಯ ಪುರುಷರು , ಮಹಿಳೆಯರು ಮತ್ತು ಮಕ್ಕಳು ಭಾಗವಹಿಸಿದರು.

ಕೊನೆಯಲ್ಲಿ ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಯಿತು.

### ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

# 2024–25 ನೇ ಸಾಲಿನ ಪ್ರಗತಿ ವರದಿ

**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ :ಮಾನವ ದಿನಗಳ ಸೃಜನೆಯ ವಾರ್ಷಿಕ ಗುರಿ 15.25 ಲಕ್ಷ, ಅನುದಾನ ರೂ. 9402.64 ಲಕ್ಷಗಳ ನಿಗದಿ. ಯೋಜನೆಯಡಿ ಒಟ್ಟು 73877 ಕುಟುಂಬಗಳಿಗೆ ಜಾಬಕಾರ್ಡ ವಿತರಣೆ ಮಾಡಲಾಗಿರುತ್ತದೆ. ಡಿಸೆಂಬರ್–2024ರ ಮಾಹೆಯ ಅಂತ್ಯಕ್ಕೆ ಒಟ್ಟು ಮಾನವ ದಿನಗಳ ಸೃಜನೆಯ ಗುರಿ 12.39 ಲಕ್ಷ ಸಾಧನೆ 10.99 ಲಕ್ಷ ಶೇ 85%, ಮಹಿಳಾ ಭಾಗವಹಿಸುವಿಕೆ 54.56% ಕೂಲಿ, ಸಾಮಾಗ್ರಿ ಒಟ್ಟು ರೂ.3863.25 ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ. (ಗ್ರಾ.ಪಂ & ಅನುಷ್ಠಾನ ಇಲಾಖೆ) ಕೂಲಿ ಒಂದು ದಿನಕ್ಕೆ ರೂ.349/– ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ :1877 ಕೆರೆ, ಚೆಕ್ ಡ್ಯಾಂ ನಾಲಾ ಹೂಳೆತ್ತುವುದು, ವೈಯಕ್ತಿಕ ಬಚ್ಚಲು ಗುಂಡಿ, ಬದು ನಿರ್ಮಾಣ, ಕೃಷಿಹೊಂಡ, ದನದದೊಡ್ಡಿ, ಮೇಕೆ ಶೆಡ್ ನಿರ್ಮಾಣ ಮತ್ತು ಶಾಲಾಭಿವೃದ್ಧಿ ಕಾಮಗಾರಿಗಳು, ಹಿಪ್ಪು ನೇರಳೆ ಮತ್ತು ತೋಟಗಾರಿಕೆ ಬೆಳೆ ಅನುಷ್ಠಾನಗೊಳಿಸಲು ಆದ್ಯತೆ ನೀಡಲಾಗಿದೆ. ಬೆಟಗೇರಿ ಗ್ರಾ.ಪಂಯ ಮೊರನಾಳ ಗ್ರಾಮ ಹಾಗು ಲೇಬಗೇರಿ ಗ್ರಾ.ಪಂಯ ಕಾಮನೂರು ಗ್ರಾಮಗಳನ್ನು ನರೇಗಾದಡಿ ದತ್ತು ತೆಗೆದು–ಕೊಂಡಿದ್ದು ಕಾಮಗಾರಿಗಳ ಪ್ರಗತಿಯಲ್ಲಿರುತ್ತವೆ. ಪ್ರತಿ ಮಾನವ ದಿನಕ್ಕೆ ಮಹಿಳಾ ಕಾಯಕ ಬಂಧುವಿಗೆ ರೂ.5/–ಹಾಗೂ ಪುರುಷ ಕಾಯಕ ಬಂಧುಗಳಿಗೆ ರೂ.4/– ಬ್ಯಾಂಕ್ ಖಾತೆಗೆ ಓಜ–ಈಓಖ ಮೂಲಕ ಪಾವತಿಗೆ ಅವಕಾಶವಿರುತ್ತದೆ. ತಾಲೂಕಿನ 35 ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಶೇ.50%ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

### ಜ.17, 18 ರಂದು ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರಿಂದ

# ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.15–ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಜ.17 ಮತ್ತು 18 ರಂದು ಬಳ್ಳಾರಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು.

ಜ.17 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು. ಜಿಲ್ಲೆಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿ, ನೌಕರರಿಂದ ತಮಗೆ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬವೇನಾದರೂ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ಯಾವುದೇ ತರಹದ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಅದರಿಂದ ತೊಂದರೆಗೊಳಗಾದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದು.

ಜ.18 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ (ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ) ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ. ಹಾಗಾಗಿ ದೂರುದಾರರು ಮತ್ತು ಎದುರುದಾರರು ನಿಗದಿತ ಸಮಯದಲ್ಲಿ ಹಾಜರಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ದರಾಜು.ಸಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಡಿತರದಾರರು ತಪ್ಪದೇ ಇ–ಕೈವೈಸಿ ಮತ್ತು ಮ್ಯಾಪಿಂಗ್ ಮಾಡಿಸಲು ಸೂಚನೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.15:ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ತಮ್ಮ ಕುಟುಂಬದ ಎಲ್ಲಾ ಸದಸ್ಯರ ಇ–ಕೈವೈಸಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಫಲಾನುಭವಿಗಳು ಮ್ಯಾಪಿಂಗ್ ಮಾಡಿಸಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನ ಅವರು ತಿಳಿಸಿದ್ದಾರೆ. ಆರ್ಥಿಕವಾಗಿ ದುರ್ಬಲರಿರುವ ಕುಟುಂಬಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುತ್ತಿರುವ ಬಿಪಿಎಲ್ ಪಡಿತರವನ್ನು ಆಹಾರ ಭದ್ರತಾ ಕಾಯ್ದೆ ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ಕಡ್ಡಾಯವಾಗಿ ತಮ್ಮ ಕುಟುಂಬದ ಎಲ್ಲಾ ಸದಸ್ಯರ ಇ–ಕೈವೈಸಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಫಲಾನುಭವಿಗಳ ಮ್ಯಾಪಿಂಗ್ ಕಾರ್ಯಚಾಲ್ತಿಯಲ್ಲಿದ್ದು, ಜಾತಿವಾರು ಮ್ಯಾಪಿಂಗ್ ಮಾಡಿಸಬೇಕು. ಜಿಲ್ಲೆಯಲ್ಲಿ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿದಾರರು ಈಗಾಗಲೇ ಕುಟುಂಬ ಪಡಿತರ ಚೀಟಿಯಲ್ಲಿನ ಎಲ್ಲಾ ಸದಸ್ಯರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿಯೇ ಕುಟುಂಬದ ಎಲ್ಲಾ ಸದಸ್ಯರು ಕಡ್ಡಾಯವಾಗಿ ತಮ್ಮ ಬೆರಳಚ್ಚು ನೀಡಿ (ಇ–ಕೈವೈಸಿ) ನವೀಕರಿಸಿಕೊಳ್ಳಬೇಕು. ಇ–ಕೈವೈಸಿ ಆಗದ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮ್ಯಾಪಿಂಗ್ ಆಗದ ಫಲಾನುಭವಿಗಳ ಪಟ್ಟಿಯನ್ನು ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರಕಟಿಸಲಾಗಿದೆ. ಇ–ಕೈವೈಸಿ ಮತ್ತು ಜಾತಿವಾರು ಮ್ಯಾಪಿಂಗ್ ಆಗದ ಫಲಾನುಭವಿಗಳು ಕೂಡಲೇ ಮ್ಯಾಪಿಂಗ್ ಮಾಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ. ಪೋರ್ಟಬಲಿಟಿಯಿಂದ ಸ್ವೀಕರಿಸುವ ಕಾರ್ಡುದಾರರು ಅಥವಾ ವಲಸೆ ಹೋಗಿರುವ ಕಾರ್ಡುದಾರರ ಸದಸ್ಯರು ತಾವು ಇರುವ ಸ್ಥಳದಲ್ಲಿಯೇ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಆಧಾರ್ ಪ್ರತಿಯೊಂದಿಗೆ ಬೆರಳಚ್ಚು ನೀಡಿ ಇ–ಕೈವೈಸಿ ನವೀಕರಿಸಿಕೊಳ್ಳಬೇಕು ಮತ್ತು ಜಾತಿವಾರು ಮ್ಯಾಪಿಂಗ್ ಮಾಡಿಸಬೇಕು. ಇ–ಕೈವೈಸಿ ನವೀಕರಿಸಿಕೊಳ್ಳದ ಪಡಿತರ ಚೀಟಿದಾರರಿಗೆ/ಸದಸ್ಯರಿಗೆ ಮುಂದಿನ ತಿಂಗಳು ಆಹಾರಧಾನ್ಯಗಳ ಹಂಚಿಕೆ ಸ್ಥಗಿತಗೊಳಿಸಲಾಗುವುದು. ಹಾಗಾಗಿ ಕೂಡಲೇ ಪಡಿತರ ಚೀಟಿದಾರರು ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಉಚಿತವಾಗಿ ಇ–ಕೈವೈಸಿ ಮಾಡಿಕೊಳ್ಳಲು ಜ.31ರ ವರೆಗೆ ಕೊನೆಯ ಕಾಲಾವಕಾಶ ನೀಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯ ಕುಸ್ತಿಪಟು

# ಮಂಜುನಾಥ ಖೇಲೊ ಇಂಡಿಯಾ ಯುನಿವರ್ಸಿಟಿ ಗೇಮ್ಸಗೆ ಆಯ್ಕೆ

**ಮಲ್ಲಮ್ಮ ನುಡಿ ವಾರ್ತೆ**



ಬಳ್ಳಾರಿ,ಜ.15:ಪಂಜಾಬ್‌ನಗುರು ಕಾಶಿ ವಿಶ್ವವಿದ್ಯಾಲಯದಲ್ಲಿ ನಡೆದ ಅಖಿಲಭಾರತಅಂತರ್‌ವಿಶ್ವವಿದ್ಯಾಲಯ ಪುರುಷಮತ್ತುಮಹಿಳೆಯರ ಕುಸ್ತಿ ಪಂದ್ಯಾವಳಿಯಲ್ಲಿ ಬಳ್ಳಾರಿಯ ವಿಜಯನಗರಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಸ್ತಿಪಟು ಮಂಜುನಾಥ (ಶ್ರೀಮಾತಾ ಕಾಲೇಜು ಹೊಸಪೇಟೆ) 79 ಕೆಜಿ ವಿಭಾಗದಲ್ಲಿ ಫ್ರೀ ಸ್ಟೈಲ್ ಕುಸ್ತಿ ಅಖಿಲ ಭಾರತ ಅಂತರ್‌ವಿಶ್ವವಿದ್ಯಾಲಯಕ್ರೀಡಾಕೂಟದಲ್ಲಿ 5 ನೇ ಸ್ಥಾನ ಪಡೆಯುವುದರ ಮೂಲಕ ಖೇಲೊ ಇಂಡಿಯಾ ಯುನಿವರ್ಸಿಟಿ ಗೇಮ್ಸ್ 2025 ಕ್ಕೆ ಅರ್ಹತೆ ಪಡೆದಿದ್ದಾರೆ.ಈ ಕ್ರೀಡಾಪಟುವಿನ ಸಾಧನೆಗೆ ವಿಜಯನಗರಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು(ಆಡಳಿತ),ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ ಹಾಗೂ ಕುಸ್ತಿ ತಂಡದ ವ್ಯವಸ್ಥಾಪಕರು ಮತ್ತು ತರಬೇತುದಾರರಾದ ಮಲ್ಲಿಕಾರ್ಜುನ ವೈ.ಡಿ ಮತ್ತು ಮಧುಕರ. ಸೇರಿದಂತೆ ಬೋಧಕ ಮತ್ತು ಬೋಧ–ಕೇತರ ಸಿಬ್ಬಂದಿ ವರ್ಗದವರು ಶುಭ ಕೋರಿದ್ದಾರೆ.

# ಉರಗಪ್ರೇಮಿ ವಸಂತ್ ಗೆ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರ

**ಮಲ್ಲಮ್ಮ ನುಡಿ ವಾರ್ತೆ**




ಕೊಪ್ಪಳ: ಜಿಲ್ಲೆಯ ಕೆರೆಹಳ್ಳಿ ಗ್ರಾಮ ಸೇರಿದಂತೆ ಸುತ್ತಮುತ್ತಲ ಹಲವಾರು ಗ್ರಾಮಗಳಲ್ಲಿ ಪರಿಸರ, ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮತ್ತು ಜಾಗೃತಿ ಮೂಡಿಸುತ್ತಿರುವ ಉರಗಪ್ರೇಮಿ ವಸಂತ್ ಶಿಳ್ಳೆಕ್ಯಾತರ್ ಇವರಿಗೆ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಗಿದೆ.

ಕರ್ನಾಟಕಸರ್ಕಾರದಿಂದಮಾನ್ಯತೆ ಪಡೆದ ತಾಲೂಕಿನ ಗುಳದಳ್ಳಿಯ ಶ್ರೀ ಸ್ವಾಮಿ ವಿವೇಕಾನಂದ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 14ನೇ ಶಾಲಾ ವಾರ್ಷಿಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀ ಸ್ವಾಮಿ ವಿವೇಕಾನಂದರ 162ನೇ ಜಯಂತ್ಯೋತ್ಸವ ಹಾಗೂ ಸರಸ್ವತಿ ಪೂಜಾ ಸಮಾರಂಭದಲ್ಲಿ ವಸಂತ್ ಶಿಳ್ಳೆಕ್ಯಾತರ್ ಅವರಿಗೆ ಪ್ರಸಕ್ತ ಸಾಲಿನ ವಿವೇಕಶ್ರೀ ಪ್ರಶಸ್ತಿ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗಿದೆ.

ಶಾಲೆಯ ಕಾರ್ಯದರ್ಶಿ ರಮೇಶ್ ಫಕೀರಪ್ಪ ಹೊಳೆಯಾಚೆ ಇವರು ವಸಂತ್ ಅವರ ವನ್ಯಜೀವಿ ಕಾಳಜಿಯನ್ನು ಗುರುತಿಸಿ, ಸಂಸ್ಥೆಯ ವತಿಯಿಂದ ವನ್ಯಜೀವಿ ಕ್ಷೇತ್ರ ವಿಭಾಗದಲ್ಲಿ ಈ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಸಂತ್ ಅವರಂತೆ ಎಲ್ಲ ಗ್ರಾಮಗಳ ಯುವಕರು ಇದೇರೀತಿ ವನ್ಯ ಜೀವಿಗಳನ್ನು ರಕ್ಷಿಸಲು ಮುಂದಾಗಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ.

ಮೂಲತಃ ಕೆರೆಹಳ್ಳಿ ಗ್ರಾಮದ ವಸಂತ್ ಶಿಳ್ಳೆಕ್ಯಾತರ್ ಬಡತನದಲ್ಲಿ ಹುಟ್ಟಿದವರು. ಹುಚ್ಚಪ್ಪ ಮತ್ತು ಪಕ್ಕಿರಮ್ಮ ದಂಪತಿಗಳ ಪುತ್ರನಾಗಿರುವ ವಸಂತ್ ಬಾಲ್ಯದಲ್ಲಿ ಕುರಿ, ಆಡುಗಳನ್ನು ಮೇಯಿಸಿಕೊಂಡು ಸದಾ ಗುಡ್ಡಗಾಡು ಪ್ರದೇಶದಲ್ಲಿ ಜೀವನಕಳೆದವರು. ಯೌವನಾವಸ್ಥೆಗೆ ಬರುತ್ತಿದ್ದಂತೆ ಕುರಿ, ಆಡು ಮೇಯಿಸುವ ಕಾಯಕದಿಂದ ವಿಮುಖರಾಗಿ ಬೆಂಗಳೂರಿಗೆ ಹೊಟ್ಟೆಪಾಡು ಅರಸಿ ವಲಸೆ ಹೋಗಿದ್ದರು. ಬಳಿಕ ಮರಳಿ ಹುಟ್ಟೂರಿಗೆ ತೆರಳಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗಿರುವಾಗ ಗ್ರಾಮವೊಂದರಲ್ಲಿ ಹಾವು ಕಂಡ ತಕ್ಷಣ ಸ್ಥಳೀಯರು ಸಾಯಿಸಲು ಹೊರಟಿದ್ದರು. 'ಕೊಲ್ಲಬೇಡಿ, ಅವೂ ನಮ್ಮಂತೆ ಜೀವಿಗಳು' ಎಂದು ತಿಳುವಳಿಕೆ ಮೂಡಿಸಿ ಅಂದಿನಿಂದ ಹಾವುಗಳನ್ನು ಹಿಡಿಯುವ ಕಾಯಕ ಮಾಡಿಕೊಂಡಿದ್ದಾರೆ.

ಕೆರೆಹಳ್ಳಿ, ಗುಳದಳ್ಳಿ, ಶಹಪುರ, ಲಿಂಗದಹಳ್ಳಿ, ಬೇವಿನಹಳ್ಳಿ, ಚಂದ್ರಗಿರಿ, ಬೂದಗುಂಪಾ, ಗಬ್ಬೂರು, ದನಕನದೊಡ್ಡಿ, ಕೂಕನಪಳ್ಳಿ, ಇಂದರಗಿ, ನಾಗೇಶನಹಳ್ಳಿ, ಗಿಣಿಗೇರಿ, ಮುಕ್ಕುಂಪಿ, ಜಬ್ಬಲಗುಡ್ಡ, ಬಿಳೇಬಾವಿ, ಅಗಳಕೇರಿ, ಹಿಟ್ನಾಳ, ಬಸಾಪಟ್ಟಣ, ಕೊಪ್ಪಳ, ಬನ್ನಿಹಟ್ಟಿ, ಟಿಬಿ ಡ್ಯಾಂ, ಹೆಗ್ಗಡಳ್ಳಿ, ಬಂಡಿ–ಕುಂಟಿ, ಕಲ್ಲಲಿಂಗನಹಳ್ಳಿ ಮತ್ತು ವಿಠಲಾಪುರ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಇದುವರೆಗೆ 6 ಸಾವಿರಕ್ಕೂ ಅಧಿಕ ಹಾವುಗಳನ್ನು ಹಿಡಿದು ರಕ್ಷಿಸಿದ್ದಾರೆ. ಗಾಯಗೊಂಡ ಹಾವುಗಳನ್ನು ಕಾಡಿಗೆ ಬಿಟ್ಟರೆ ಇರುವೆ ಮುತ್ತಿ, ಸಾವಿಗೀಡಾಗುವ ಸಂಭವ ಇರುವುದರಿಂದ ಅಂತಹ ಹಾವುಗಳಿಗೆ ಮನೆಯಲ್ಲಿಯೇ ಅರಣ್ಯಜೀವಿ ವೈದ್ಯರ ಸಲಹೆಗಳನ್ನು ಪಡೆದು ಉಪಚಾರ ಮಾಡಿ, ಬಳಿಕ ಕಾಡಿಗೆ ಬಿಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ನಾಗರಹಾವು, ಮಂಡಲ ಹಾವು, ಕೇರೆ ಹಾವು, ರಕ್ತ ಮಂಡಲ, ಬ್ಲೈಂಡ್ ಪೆಂಜರಿ, ಭರ್ಚಿ, ಮಿಡಿ ನಾಗರ, ಮಣ್ಣುಕ್ಕ ಹೀಗೆ ಹಲವಾರು ಸರೀಸೃಪಗಳಿಗೆ ಜೀವದಾನ ಮಾಡಿ ಕಾಡಿಗೆ ಬಿಡುವ ಕಾಯಕ ಮಡಿಕೊಂಡಿರುವ ವಸಂತ್ ಅವರ ವನ್ಯಜೀವಿ ಪ್ರೇಮಕ್ಕೆ ಪ್ರಶಸ್ತಿ ಸಂದಿರುವುದು ಖುಷಿ ತಂದಿದೆ ಎಂದು ವಸಂತ್ ಸಂಭ್ರಮಿಸಿದ್ದಾರೆ.

ಹಾವು ಕಂಡ ತಕ್ಷಣ ಯಾ–ರೇ ಮೊಬೈಲ್ ಕರೆ ಮಾಡಿದರೆ ದಿನದ 24 ಗಂಟೆಯೂ ವಸಂತ್ ಹಾವುಗಳನ್ನು ಹಿಡಿಯುವಲ್ಲಿ ಸಿದ್ಧರಿದ್ದಾರೆ. ಮನೆ, ಕೊಟ್ಟಿಗೆ, ಗೋಡಾನ್, ಕಚೇರಿ, ಶಾಲೆ, ಕಾಲೇಜು ಆವರಣ, ಹೊಲ, ಗದ್ದೆಗಳಲ್ಲಿ ಹಾವು ಕಂಡರೆ ಕೊಲ್ಲಬೇಡಿ. ನನ್ನ ಈ 96638 33914 ಕರೆ ಮಾಡಿದರೆ ಹಾವುಗಳನ್ನು ಸುರಕ್ಷಿತವಾಗಿ ಹಿಡಿದು ಕಾಡಿಗೆ ಬಿಡುವುದಾಗಿ ವಸಂತ್ ಹೇಳಿದ್ದಾರೆ.

# ಜ.19 ರಂದು ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.15–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ಜ.19 ರಂದು ಬೆಳಿಗ್ಗೆ 11.30 ಗಂ–ಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಬಿ.ಎಂ.ನಾಗರಾಜ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ರೆಡ್ಡಿ ಜನಸಂಘ ಜಿಲ್ಲಾಧ್ಯಕ್ಷ ಎನ್.ಪ್ರತಾಪ್ ರೆಡ್ಡಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀಸತ್ಯಂಶಿಕ್ಷಣಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಅಲ್ಲಂಭಾಷ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಎನ್.ಬಸವರಾಜು ತಂಡದಿಂದ ವೇಮನ ಪದ್ಯಗಳು ಪ್ರಸ್ತುತ ಪಡಿಸುವರು.

*ಮೆರವಣಿಗೆ:*

ಜಯಂತಿ ಅಂಗವಾಗಿ ಅಂದು ಬೆಳಿಗ್ಗೆ 09.30 ಗಂಟೆಗೆ ಮೆರವಣಿಗೆ ನಡೆಯಲಿದ್ದು, ಮೆರವಣಿಗೆಯು ಡಾ.ರಾಜ್‌ಕುಮಾರ್ ರಸ್ತೆಯ ರೆಡ್ಡಿ ಜನಸಂಘ ಆವರಣದಿಂದ ಆರಂಭವಾಗಿ ಇಂದಿರಾವೃತ್ತ–ಗಡಿಗೆ ಚೆನ್ನಪ್ಪವೃತ–ಬೆಂಗಳೂರು ರಸ್ತೆ–ತೇರು ಬೀದಿ–ಜೈನ್ ಮಾರ್ಕೆಟ್–ಹೆಚ್.ಆರ್.ಗವಿಯಪ್ಪ ವೃತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡರಂಗಮಂದಿರದವರೆಗೆ ನಡೆಯಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಜ.21 ರಂದು ಅಂಬಿಗರ ಚೌಡಯ್ಯ ಜಯಂತೋತ್ಸವ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಜ.15–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಜ.21 ರಂದು ಬೆಳಿಗ್ಗೆ 11.30 ಗಂ–ಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಬಿ.ಎಂ.ನಾಗರಾಜ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷ ಡಾ.ಬಿ.ಮೌಲಾಲಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ.ಸಿದ್ದಲಿಂಗಪ್ಪ ಅವರು ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಕಂಪ್ಲಿಯ ಎಮ್ಮಿಗನೂರಿನ ರಾಜು ತಂಡದಿಂದ ವಚನ ಗಾಯನ ಮತ್ತು ಬಲಕುಂದಿಯ ಬಸವರಾಜು ತಂಡದಿಂದ ನೃತ್ಯ ಕಾರ್ಯಕ್ರಮ ಇರಲಿದೆ.

*ಮೆರವಣಿಗೆ:*

ಜಯಂತಿಯ ಮೆರವಣಿಗೆಯು ಅಂದು ಬೆಳಿಗ್ಗೆ 09.30 ಗಂಟೆಗೆ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗೆ ಚೆನ್ನಪ್ಪ ವೃತದಿಂದ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ರೈಲ್ವೆ ಸ್ಟೇಷನ್, ಹೆಚ್.ಆರ್.ಗವಿಯಪ್ಪ ವೃತದ ಮಾರ್ಗವಾಗಿ ಡಾ.ಜೋಳದರಾಶಿ ದೊಡ್ಡನಗೌಡರಂಗಮಂದಿರದವರೆಗೆ ನಡೆಯಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಬಳವಾಡ: ದ್ಯಾವಮ್ಮ ದೇವಿ ಗುಡಿ ಬೀಗ ಮುರಿದು ಚಿನ್ನಾಭರಣ ಕಳವು

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಜ.15–ಫರಹತಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಬಳವಾಡ ಗ್ರಾಮದ ದ್ಯಾವಮ್ಮ ದೇವಿಯ ಗುಡಿ ಬೀಗ ಮುರಿದು ದೇವಿಯ ಮೂರ್ತಿ ಮೇಲಿದ್ದ ಬಂಗಾರದ ತಾಳಿ, ಒಂದು ಜೊತೆ ಕಿವಿ ಓಲೆ ಮತ್ತು ಒಂದು ಮೂಗುತಿ ಸೇರಿ 40 ಸಾವಿರ ರೂಪಾಯಿ ಮೌಲ್ಯದ 11 ಗ್ರಾಂ.ಬಂಗಾರದ ಆಭರಣವನ್ನು ಕಳ್ಳರು ಕಳವು ಮಾಡಿದ್ದಾರೆ.

ಗುಡಿಯ ಪೂಜಾರಿ ವಿಶ್ವನಾಥ ವಾಲಿಕಾರ ಅವರು ನೀಡಿದ ಮಾಹಿತಿ ಅನುಸಾರ ಗ್ರಾಮ ಪಂಚಾಯತಿ ಸದಸ್ಯ ಮನೋಹರ ಜ್ಞಾನಮಿತ್ರ ಕುರಿ ಅವರು ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಬಿಜೆಪಿ ಪಕ್ಷದ ಸಂಘಟನೆಗೆ ಒತ್ತು ನೀಡಿ:ಮೇತ್ರಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:-ಬಿಜೆಪಿ ಪಕ್ಷದ ಕಾರ್ಯಕರ್ತರು ಮುಂಬರುವ ತಾಲೂಕ ಪಂಚಾಯತ್, ಜಿಲ್ಲಾ ಪಂಚಾಯತ ಚುನಾವಣೆಗೆ ಪಕ್ಷದ ಸಂಘಟನೆಗೆ ಶ್ರಮಿಸಬೇಕು ಎಂದು ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷದಯಾನಂದಮೇತ್ರಿರವರು ತಾಲೂಕಿನ ಹುಡಗಿ ಗ್ರಾಮದಲ್ಲಿ ನೂತನ ಪಿಕೆಪಿಎಸ್ ನಿರ್ದೇಶಕರಿಗೆ ಸನ್ಮಾನಿಸಿಮಾತನಾಡುತ್ತಾತಿಳಿಸಿದರು. ಶಾಸಕ ಡಾ. ಸಿದ್ದು ಪಾಟೀಲ್, ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಯಲ್ಲಿ ಪಕ್ಷ ಜಯ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು. ತಾಲೂಕಿನ ಹುಡಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ 8 ಜನ ಬಿಜೆಪಿ ಬೆಂಬಲಿತ ನಿರ್ದೇಶಕರಾಗಿ ಆಯ್ಕೆ ಆಗಲು ಕಾರಣರಾದ ಹುಡಗಿ, ಕಪರಗಾಂವ, ವಡ್ಡನಕೇರಾ ಗ್ರಾಮದ ಮತದಾರರಿಗೆ ನೂತನ ನಿರ್ದೇಶಕರಾದ ಬಸತೀರ್ಥಯ್ಯ ವೀರಭದ್ರಪ್ಪ ಸಿಂಧನಕೇರಾ ಸನ್ಮಾನ ಸ್ವೀಕರಿಸಿ ಮಾತನಾಡಿ, ರೈತ ಮತದಾರರು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಮೇಲೆ ವಿಶ್ವಾಸವಿಟ್ಟು ಬೆಂಬಲಿಸಿದಕ್ಕೆ ಧನ್ಯವಾದಗಳು ಸಲ್ಲಿಸಿದರು. ನಿರ್ದೇಶಕರಾದ ಅಶೋಕ ಪಾಟೀಲ್ ಮಾತನಾಡಿ, ಸರ್ಕಾರದಿಂದ ರೈತರಿಗೆ ಸಿಗುವ ಸೌಲಭ್ಯಗಳನ್ನುಒದಗಿಸಿಕೊಡುವುದಾಗಿ ಭರವಸೆ ನೀಡಿದರು. ಪಿಕೆಪಿಎಸ್ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಿಗೆ ಮತ ನೀಡಿ ಗೆಲ್ಲಿಸಿದ್ದಕ್ಕೆ ಧನ್ಯವಾದಗಳು ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ದಯಾನಂದ ಮೇತ್ರಿ ನೇತೃತ್ವದಲ್ಲಿ ನೂತನ ನಿರ್ದೇಶಕರಾದ ಶರಣಪ್ಪ ಕರಬಸಪ್ಪ ಸಿದ್ದಣ್ಣ, ಮಡಿವಾಳಪ್ಪ ಸಿದ್ರಾಮಪ್ಪ ಭಗೀರಥಿ, ಕಿಶನಸಿಂಗ್ ಹರಿಸಿಂಗ ರಾಜಪುತ್ರ, ಭಾರತಿ ವಿಶ್ವನಾಥ ಮಾಶೆಟ್ಟಿ, ಈರಮ್ಮಾ ಗುರುಲಿಂಗಪ್ಪ ಮಲ್ಲಶೆಟ್ಟಿ ಇವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಪ್ರಮುಖರಾದ ಚನ್ನಪ್ಪ ಖನಶೆಟ್ಟಿ, ರೇವಣ್ಣಪ್ಪ ಮುಸ್ತರಿ, ಪರಮೇಶ್ವರ್ ಮಲಶೆಟ್ಟಿ, ಮಹಾ ಶಕ್ತಿ ಕೇಂದ್ರ ಅಧ್ಯಕ್ಷ ಶಿವಕುಮಾರ್ ಮಾಶೆಟ್ಟಿ, ಬಿಜೆಪಿ ಬೂಟ್ ಅಧ್ಯಕ್ಷ ಯುವರಾಜ್ ಬೋಯಿ, ಲಿಂಗರಾಜ ಮೇಲದೊಡ್ಡಿ, ಬಸವರಾಜ ಮೇಲದೊಡ್ಡಿ, ಪ್ರಭಾಕರ ಬಿರಾದಾರ್, ಅಶೋಕ ಮೂಲಗೆ, ಸಂಗಮೇಶ ಮೇಲದೊಡ್ಡಿ, ಶಿವರಾಜ ವಾಡೇಕರ್, ಶ್ರೀದೇವಿ ದಯಾನಂದ ಮೇತ್ರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶಿಕ್ಷಕರು ಮಕ್ಕಳಲ್ಲಿ ಸಾಹಿತ್ಯ, ಕಲಾಭಿರುಚಿ ಮೂಡಿಸಬೇಕು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.15-ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಒಲುವು ಹಾಗೂ ಕಲೆ, ಸಂಸ್ಕೃತಿಯ ಬಗ್ಗೆ ಅಭಿರುಚಿ ಮೂಡಿಸಬೇಕು ಎಂದು ಸಾಹಿತಿ ಲಕ್ಷ್ಮಣ ಬದಾಮಿ ಹೇಳಿದ್ದಾರೆ.

ಅವರು ತಾಲೂಕಿನ ಶಿರೂರ ಪಟ್ಟಣದ ಟಿ.ಎಂ.ಭಗವತಿ ಶಿಕ್ಷಣ ಸಂಸ್ಥೆಯ ವಿವಿಧ ಶಾಲೆಗಳ ರೋವರ್ಸ್ ಚಟುವಟಿಕೆಗಳ ಮುಕ್ತಾಯ ಕಾರ್ಯಕ್ರಮ, ಸ್ವಾಮಿ ವಿವೇಕಾನಂದರ ಜಯಂತಿ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವಿವಿಧ ಬಗೆಯ ಅಭಿರುಚಿ, ಆಸಕ್ತಿಗಳಿದ್ದು ಅವರಿಗೆ ಇಷ್ಟವಾದ ಚಟುವಟಿಕೆಗಳಲ್ಲಿ ತೆ-ೂಡಗಿಸಿ ಪ್ರತಿಭೆ ಬೆಳಗಿಸಬೇಕು ಎಂದರು.

ಇಂದಿನ ಪ್ರತಿ ಮಕ್ಕಳಿಗೆ ಶಿಕ್ಷಕರು ನಿತ್ಯ ಪಾಠದೊಂದಿಗೆ ಸಾಹಿತ್ಯ, ಕಲೆ, ಸಂಸ್ಕೃತಿಯ ಬಗ್ಗೆ ಅಭಿರುಚಿ ಮೂಡಿಸಿ ಗುಣಾತ್ಮಕವಾದ ಭೋದನೆಗೆ ಮುಂದಾಗಬೇಕೆಂದು ಯುವ ಸಾಹಿತಿ ಲಕ್ಷ್ಮಣ ಬಾದಾಮಿ ಹೇಳಿದರು.

ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯಾಧಿಕಾರಿ ಎಚ್.ಕೆ.ಗುಡೂರ ಮಾತನಾಡಿ, ಶಿಕ್ಷಕ ಆಸಕ್ತಿಯಿಂದ ಪಾಠ ಮಾಡಿದಾಗ ಮಾತ್ರ ವಿದ್ಯಾರ್ಥಿಗಳಿಗೆ ಆ ವಿಷಯ ಮನಮುಟ್ಟಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಶ್ರೀಶೈಲ ಕರಿಶಂಕರಿ, ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ತಮ್ಮಣ್ಣ ಗಿರಿಜಾ ಮಾತನಾಡಿದರು. ನಂತರ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ನಿವೃತ್ತ ಕಸ್ಟಮ್ ಅಧಿಕಾರಿ ಆರ್.ಎಸ್.ಪಾಟೀಲ, ಸಿ.ಎನ್.ಕಟಗಿ, ಸಂಪನ್ಮೂಲ ವ್ಯಕ್ತಿ ಕಮಾಲಾಕ್ಷಿ ಕುಂಟೋಜಿ, ಬಸಪ್ಪ ಮೆಣಸಗಿ, ರಾಜಶೇಖರ ಅಂಗಡಿ, ರಂಗಪ್ಪ ಮಳ್ಳಿ ಹಾಗೂ ಅಂಗ ಸಂಸ್ಥೆಯ ಪ್ರಾಚಾರ್ಯರಾದ ಸಂಗಮೇಶ ಕೆಂಜೋಡಿ, ಎಸ್.ಎಸ್.ಮುಳ್ಳೂರು, ಎಸ್.ಎಂ.ಪತ್ತಾರ, ಐ.ಸಿ.ಹೊಸೂರು ಹಾಗೂ ಸಿಬ್ಬಂದಿ ವರ್ಗ, ಆಡಳಿತ ಮಂಡಳಿಯ ಪದಾಧಿಕಾರಿಗಳು ಇದ್ದರು.

# ಫಕೀರಪ್ಪ ಮಾದರಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.15-ಬಾಗಲಕೋಟೆ ಜಿಲ್ಲಾ ಮಟ್ಟದ ಜಾಗೃತಿ ಹಾಗೂ ಉಸ್ತುವಾರಿ ಸಮಿತಿಗೆ ನೇಮಕವಾಗಿರುವ ಫಕೀರಪ್ಪ ಮಾದರ ಅವರನ್ನು ಗದ್ದನಕೇರಿ ಗ್ರಾಮದ ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು.

ಮುಖಂಡರಾದ ಸಿದ್ದಪ್ಪ ಛಬ್ಬಿ, ಸಿದ್ದನಗೌಡ ಜಕ್ಕನಗೌಡ್ರ, ಶಿವು ರಾಠೋಡ, ಮಹಾಂತೇಶ ಹಡಪದ, ವಿರುಪಾಕ್ಷಪ್ಪ ಮಾವಡಿ, ಸಿದ್ದನಗೌಡ ಪಾಟೀಲ, ಭರಮಣ್ಣ ಕೋಟಿ, ಶ್ರೀಶೈಲ ಬೆಣ್ಣೂರ, ಚಂದ್ರು ಕುರಿ, ಕಾಮೇಶ ಭೋವಿ, ಲಕ್ಷ್ಮಣ ಸೇರಿದಂತೆ ಇತರರು ಇದ್ದರು.

# ಶಾಸಕ ಮಾನಪ್ಪ ವಜ್ಜಲ್ 4 ನೂತನ ಡಯಾಲಿಸಸ್ ಯಂತ್ರಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು:ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ನೂತನವಾಗಿ ಬಂದಿರುವ 4 ಡಯಾಲಿಸಸ್ ಯಂತ್ರಗಳಿಗೆ ಶಾಸಕ ಮಾಣಪ್ಪ ವಜ್ಜಲ್ ಚಾಲನೆ ನೀಡಿದರು

2024-25ನೇ ಸಾಲಿನ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಮಂಜೂರಿಯಾದ ಅಂದಾಜು ಹಣ 26 ಲಕ್ಷದಲ್ಲಿ ಡಯಾಲಿಸಸ್ ನ ನಾಲ್ಕು ನೂತನ ಯಂತ್ರಗಳಿಗೆ ಚಾಲನೆ ನೀಡುವುದರ ಮೂಲಕ ರೋಗಿಗಳು ಇದರ ಸದುಪಯೋಗವನ್ನು ಪಡೆದುಕೊಂಡು ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕೆಂದು ಅವರು ಹೇಳಿದರು

ತಾಲೂಕಾ ಆಸ್ಪತ್ರೆಯಲ್ಲಿ ಡಯಲಿಸಸ್ ಸೌಲಭ್ಯ ಪಡೆದ ಆಸ್ಪತ್ರೆ ನಮ್ಮದಾಗಿದ್ದು ಉತ್ತಮ ವ್ಯವಸ್ಥೆ ಕಲ್ಪಿಸಲಾಗಿದೆ ವೈದ್ಯರು ಉತ್ತಮ ಸೇವೆ ಸಲ್ಲಿಸಬೇಕು ರಾತ್ರಿ ಪಾಳೆಯಲ್ಲಿಯು ಸೇವೆ ಸಲ್ಲಿಸಬೇಕು ರೋಗಿಗಳ ಆರೋಗ್ಯವನ್ನು ಕಾಪಾಡಿ ಉತ್ತಮ ಹೆಸರು ತರುವ ಕೆಲಸವಾಗಬೇಕು ಎಂದು ಕಿವಿಮಾತು ಹೇಳಿದರು

ಈ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ಮುಖಂಡ ಗಿರಿಮಲ್ಲನಗೌಡ ಪಾಟೀಲ್, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ ರುದ್ರಗೌಡ ಪಾಟೀಲ್, ತಾಲೂಕಾ ವೈದ್ಯಾಧಿಕಾರಿ ಅಮರೇಶ ಪಾಟೀಲ್, ಡಾ ದಿಗಂಬರ, ಡಾ ಬಸವರಾಜ ಹಾಗೂ ಮುಖಂಡರಾದ ವೀರಣ್ಣ ಹುರಕಡ್ಲಿ, ನಾಗಭೂಷಣ, ಫಕೀರಪ್ಪ ಕುರಿ ಸೇರಿದಂತೆ ಇದ್ದರು

# ಕಾನೂನು ಪದವಿ ಕಾಲೇಜುಗಳನ್ನು ಗುಲಬರ್ಗಾ ವಿವಿಗೆ ಸೇರಿಸಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರ:ಕಲ್ಯಾಣ ಕರ್ನಾಟಕದ ಐದು ಜಿಲ್ಲೆಗಳಾದ ಬೀದರ, ಕಲಬುರ್ಗಿ, ಯಾದಗಿರ, ರಾಯಚೂರು, ಕೊಪ್ಪಳ ಇತರೆ ಜಿಲ್ಲೆಗಳಲ್ಲಿರುವ ಸರಕಾರಿ ಹಾಗೂ ಖಸಗಿ ಕಾನೂನು ಪದವಿ ಕಾಲೇಜುಗಳನ್ನು ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ಸೇರಿಸಲು ಈ ಭಾಗದ ವಿದ್ಯಾರ್ಥಿಗಳು ಕಾನೂನು ಸಚಿವ ಎಚ.ಕೆ.ಪಾಟೀಲವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಈ ಮೊದಲು ಈ ಭಾಗದ ಕಾನೂನು ಪದವಿ ಕಾಲೇಜುಗಳ ಆಡಳಿತ ಹಾಗೂ ಪರೀಕ್ಷೆಗಳು ಕಲಬುರ್ಗಿ ವಿಶ್ವವಿದ್ಯಾಲಯಗಳಿಂದ ನಡೆಯುತ್ತಿದ್ದು ಆದರೆ ಕೆಲವು ವರ್ಷಗಳ ಹಿಂದೆ ರಾಜ್ಯದ ಎಲ್ಲಾ ಕಾನೂನು ಪದವಿ ಕಾಲೇಜುಗಳು ಹುಬ್ಬಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಸೇರ್ಪಡೆ ಮಾಡಿದು ಈ ಭಾಗದ ಕಾನೂನು ಪದವಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಲಾಗಿದೆ.

ಕಲ್ಯಾಣ ಕರ್ನಾಟಕ ಕಲಬುರ್ಗಿ ವಿಭಾಗದಲ್ಲಿ ಸಂವಿಧಾನ 371 ನೇ(ಜೆ) ಜಾರಿ ಮಾಡಿ ವಿಶೇಷ ಸ್ಥಾನ ಮಾನ ನೀಡಲಾಗಿದೆ ಆದರೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಯುವಕರು ವಂಚಿತರಾಗುತ್ತಿದ್ದಾರೆ ಕಾರಣ ಸಚಿವರು, ಸಂಸದರು, ಶಾಸಕರುಗಳು ಕಾನೂನು ಪದವಿ ಕಾಲೇಜುಗಳ ಆಡಳಿತ ಅಭಿವೃದ್ಧಿ ಹಾಗೂ ಪರೀಕ್ಷ ಪದ್ಧತಿ ಬದಲಾವಣೆಗಾಗಿ ಕಲಬುರ್ಗಿ ವಿಶ್ವವಿದ್ಯಾಲದಿಂದ ನಡೆಸುವಂತ ಆಗಬೇಕು ಎಂದು ಒತ್ತಾಯಿಸಬೇಕು.

ಕಾರಣ ಈ ಭಾಗದ ಸಂಸ್ಥೆ, ಸಂಘಟಣೆವರು ಈ ಭಾಗದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಹೋರಾಟ ಅವಶ್ಯವಿದೆ ಎನ್ನಲಾಗುತ್ತಿದೆ.



ಶಾಹಪೂರ: ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿ ಸದಸ್ಯರಾದ ಬಸವರಾಜ ಕವಿತಾಳರವರಿಗೆ ನಗರ ಆಶ್ರೆಯ ಸಮಿತಿ ಅಧ್ಯಕ್ಷರಾದ ವಸಂತ ಸುರುಪುಕರ್ ರವರು ಗೌರವಿಸಿ ಸನ್ಮಾನಿಸಿದರು, ಈ ಸಮಯದಲ್ಲಿ ನೀಲಕಂಠ ಬಡಿಗೇರ, ಮಲ್ಲಿಕಾರ್ಜುನ ಪೂಜಾರಿ, ನಾಗಣ್ಣ ಬಡಿಗೇರ, ಶಾಂತಪ್ಪ ಗುತ್ತೆದಾರ, ರಾಜ್ಯ ಕೆಪಿಸಿಸಿ ಪ.ಜಾ, ಕಾ,ಕಾ, ಸಮಿತಿ ಸದಸ್ಯರಾದ ಬಸವರಾಜ ನಾಯ್ಕಲ್, ವಾಸುದೇವ ಕಟ್ಟಿಮನಿ, ಶಿವಪುತ್ರ ಜವಳಿ,ಕೆಪಿಸಿಸಿ ಪ.ಜಾ, ಯಾದಗಿರಿ ಜಿಲ್ಲಾ ಮಾಧ್ಯಮ ವಕ್ತಾರರಾದ ಚಂದ್ರಶೇಖರ ಕಟ್ಟಿಮನಿ, ರವಿಚಂದ್ರ ಎದರಮನಿ, ಈರಪ್ಪ ದೊಡಮನಿ, ಭೀಮರಾಯ ಕದರಾಪುರ, ಭೀಮರಾಯ ಹೊಸಮನಿ, ಹಾಜರಿದ್ದರು,

# ದಲಿತಪರ ಸಂಘಟನೆಗಳ ಮುಖಂಡರ ಸಭೆ, ಒಳಮೀಸಲಾತಿ ಬಹುಪಾಲು ಸಮುದಾಯಗಳಿಗೆ ಆಶಾಕಿರಣ- ಕವಿತಾಳ,



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ,:ಸಾಮಾಜಿಕ ನ್ಯಾಯದಡಿಯಲ್ಲಿ ಒಳಮೀಸಲಾತಿ ಜಾರಿಗೊಳಿಸಿದಲ್ಲಿ, ಬಹುಪಾಲು ಸಮುದಾಯಗಳಿಗೆ ಮೀಸಲಾತಿ ಆಶಾಕಿರಣವಾಗುತ್ತದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಮಂಡಳಿ ಸದಸ್ಯರಾದ ಬಸವರಾಜ ಕವಿತಾಳರವರು ತಿಳಿಸಿದರು, ಅವರು ನಗರದ ಪ್ರವಾಸಿ ಮಂದಿರದಲ್ಲಿ ಹೊಲೆಯ ಮತ್ತು ಮಾದಿಗ ಸಮುದಾಯಗಳ ದಲಿತಪರ ಸಂಘಟನೆಗಳ ಮುಖಂಡರ ಮತ್ತು ಶೋಷಿತ ಸಮಾಜದ ಹಿರಿಯ ಮುಖಂಡರ ಸಭೆಯಲ್ಲಿ ಒಳಮೀಸಲಾತಿ ಸಂಘಟಿತ ಹೋರಾಟದ ರೂಪರೇಷಗಳ ಕುರಿತು ಪ್ರಾಸ್ತಾಪಿಸಿ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ಆಂತರಿಕ ಸಮನ್ವಯಗಳ ಕೊರತೆಯ ಹಿನ್ನೆಲೆಯಲ್ಲಿ, ಶೊಷಿತ ಸಮಾಜಕ್ಕೆ ಅನ್ಯಾಯವಾಗುತ್ತಿದೆ, ಸಂಘಟಿತ ಶಕ್ತಿ ಸದೃಡವಾಗಬೇಕು, ಭಾರತದ ಸಂವಿಧಾನ ಶಿಲ್ಪಿ ಡಾ,ಬಾಬಾಸಾಹೇಬ ಅಂಬೇಡ್ಕರವರ ಸಿದ್ಧಾಂತಗಳ ನೆಲಗಟ್ಟಿನಲ್ಲಿ ಒಗ್ಗಟ್ಟಿನ ಚಳುವಳಿ ನಡೆಬೇಕಿದೆ ಎಂದ ಅವರು, ಧರ್ಮದ ಹೆಸರಿನಲ್ಲಿ ದೊಡ್ಡ ದ್ವೇಷದ ರಾಜಕೀಯ ನಡೆಯುತ್ತಿದೆ, ಆರ್,ಎಸ್,ಎಸ್, ಆಂತಿರಕ ಜ್ವಾಲೆಯಲ್ಲಿ ದಲಿತರ ಶಕ್ತಿ ದಮನಗೊಳ್ಳುತ್ತಿದೆ ಎಂದು ಕವಿತಾಳರವರು ಕಳವಳ ವ್ಯಕ್ತಪಡಿಸಿದರು, ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದ್ದರೂ, ಮುಸ್ಲಿಂ ಹಿಂದು ಕೊಮುವಾದಗಳ ಸಂಕೊಲೆಯಲ್ಲಿ ಜಾತಿ ಹಿಂಸೆ, ದೌರ್ಜನ್ಯಗಳು ಅಮಲಿನಲ್ಲಿ ಸನಾತನ ಧರ್ಮ ಆಚರಣೆಯಲ್ಲಿ ಸಿದ್ದತೆಗಳು ನಡೆಯುತ್ತಿವೆ, ಇದೊಂದು ಅಪಾಯಕಾರಿ ಸಂಗತಿ ಎಂದು ಹೇಳಿದ ಅವರು, ಕಳೆದ ಹತ್ತು ವರ್ಷಗಳಲ್ಲಿ ಅಸಮಾನತೆ ತಾರತಮ್ಯಗಳು ಹೆಚ್ಚಾಗುತ್ತಿದ್ದು ಶೋಷಿತ ಶಕ್ತಿ ದುರ್ಭಲವಾಗುತ್ತದೆ ಎಂದು ಅವರು ಮನವರಿಕೆ ಮಾಡಿದರು. ದಲಿತ ಮುಖಂಡರಾದ ನೀಲಕಂಠ ಬಡಿಗೇರವರು ಮಾತನಾಡಿ, ಹೊಲೆಯ ಮಾದಿಗ ಸಮಾಜದ ಎಲ್ಲಾ ದಲಿತಪರ ಸಂಘಟನೆಗಳ ಒಂದೆ ವೇದಿಕೆಯ ಚಳುವಳಿ ಕುರಿತು ರಾಜ್ಯಮಟ್ಟದಲ್ಲೆ ಚರ್ಚೆಯಾಗಬೇಕು, ಕಳೆದ 32 ವರ್ಷಗಳ ದಲಿತ ಸಂಘಟನೆಯ ಹೋರಾಟ ಇಂದು ಶೋಷಿತ ಸಮಾಜಕ್ಕೆ ಶಕ್ತಿ ನೀಡಿದ್ದು, ಮರೆಯುವಂತಿಲ್ಲವೆಂದು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ದಲಿತ ಸಾಹಿತಿ ಬುದ್ಧಘೋಷ ದೇವಿಂದ್ರ ಹೆಗಡೆಯವರು ಮಾತನಾಡಿ, ಶೋಷಿತ ಸಮಾಜಗಳು ಇಂದು ಪ್ರತೇಕತೆಯನ್ನು ಮೀರಿ ಸಂಘಟಿತರಾಗಬೇಕು, ವಿಭನ್ನತೆಯನ್ನು ಮರೆತು ಒಗ್ಗಟ್ಟಿನತ್ತ ಸಾಗಬೇಕಾಗಿದೆ ಎಂದರು, ದಲಿತ ಮುಖಂಡರಾದ ಮಲ್ಲಿಕಾರ್ಜುನ ಪೂಜಾರಿ, ಶಾಂತಪ್ಪ ಗುತ್ತೆದಾರ, ನಗರ ಆಶ್ರೆಯ ಸಮಿತಿ ಅಧ್ಯಕ್ಷರಾದ ವಸಂತ ಸುರುಪುರಕರ್ ಉಪಸ್ಥಿತರಾಗಿದ್ದರು, ಮುಖಂಡರಾದ ನಾಗಣ್ಣ ಬಡಿಗೇರ, ವಾಸುದೇವ ಕಟ್ಟಿಮನಿ, ಮಾನಪ್ಪ ವತಾರ್, ಮಾತನಾಡಿದರು. ಕೆಪಿಸಿಸಿ ಎಸ್,ಸಿ,ಘಟಕದ ರಾಜ್ಯ ಪರಿಷತ್ ಸದಸ್ಯರಾದ ವೆಂಕಟೇಶ ಆಲೂರವರು ಕಾರ್ಯಕ್ರಮ ನೀರೂಪಿಸಿ ಸ್ವಾಗತಿಸಿದರು. ದಲಿತಪರ ಸಂಘಟನೆಗಳ ಮುಖಂಡರಾದ ಮರೆಪ್ಪ ಕಟ್ಟಿಮನಿ, ಶಿವುಪುತ್ರ ಜವಳಿ, ಬಸವರಾಜ ನಾಯ್ಕಲ್, ಶರಣಪ್ಪ ಕೊಂಬಿನ್, ಹೊನ್ನಪ್ಪ ಗಂಗನಾಳ, ಬಸವರಾಜ ಗುಡಿಮನಿ, ರಾಯಪ್ಪ ಸಾಲಿಮನಿ, ಶುಭಾಸ ತಳವಾರ. ಮೊಹನರಾಜ್ ಕನ್ಯಾಕೊಳೂರ, ಭೀಮರಾಯ ಕದರಾಪುರ, ರವಿಚಂದ್ರ ಎದರಮನಿ, ಪರಶುರಾಮ ರೋಜಾ. ಸೇರಿದಂತೆ ಅನೇಕ ದಲಿತ ಮುಖಂಡರು ಹಾಜರಿದ್ದರು, ಕೊನೆಯಲ್ಲಿ ದಲಿತ ಯುವ ಮುಖಂಡ ಮರೆಪ್ಪ ಜಾಲಿಮೆಂಚಿ ವಂದಿಸಿದರು, ಈ ಸಂಧರ್ಭದಲ್ಲಿ ಬಸವರಾಜ ಕವಿತಾಳರವರಿಗೆ ಗೌರವಿಸಿ ಸನ್ಮಾನಿಸಲಾಯಿತು.

ತಾಳಿಕೋಟಿ ಸಹಕಾರಿ ಬ್ಯಾಂಕ್ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

# ಹೊಸ ಪೆನಲ್ ಅಭ್ಯರ್ಥಿಗಳಿಂದ ಅಬ್ಬರದ ಪ್ರಚಾರ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ದಿ.ತಾಳಿಕೋಟಿ ಸಹಕಾರಿ ಬ್ಯಾಂಕ್ ನ 13 ನಿರ್ದೇಶಕರ ಸ್ಥಾನಗಳಿಗೆ ಜನವರಿ 19ರಂದು ನಡೆಯಲಿರುವ ಚುನಾವಣೆಗೆ ಹೊಸ ಪೆನಲ್ ಅಭ್ಯರ್ಥಿಗಳು ಅಬ್ಬರದ ಪ್ರಚಾರ ನಡೆಸಿದರು. ಬುಧವಾರ ಪಟ್ಟಣದ ನಗರೇಶ್ವರ ದೇವಸ್ಥಾನ ಬಡಾವಣೆ, ಅವಟಿಗಲ್ಲಿ ರಜಪೂತ ಓಣಿಗಳಲ್ಲಿ ಪೆನಲ್ ಅಭ್ಯರ್ಥಿಗಳು ತಮ್ಮ ಅಪಾರ ಬೆಂಬಲಿಗರೊಂದಿಗೆ ಸೇರಿ ಮತದಾರ ಸದಸ್ಯರ ಮನೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಪೆನಲ್ ಅಭ್ಯರ್ಥಿ ಘನಶಾಮ ಚೌವಾಣ ಅವರು ನಾವು ಈ ಬಾರಿ ಬ್ಯಾಂಕಿನ ಚುನಾವಣೆಯಲ್ಲಿ ನಾವು ಹೊಸ ಉತ್ಸಾಹಿ ಕ್ರಿಯಾಶೀಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಹೊಸ ಪೆನಲ್ ರಚಿಸಿದ್ದೇವೆ, ಈ ಹಿಂದೆ ಬ್ಯಾಂಕಿನಲ್ಲಿ ಆಡಳಿತ ನಡೆಸಿದವರು ಅಭಿವೃದ್ಧಿಯನ್ನು ಮಾಡದೇ ಕೇವಲ ಕುರ್ಚಿಗೆ ಅಂಟಿಕೊಂಡು ಕೆಲಸ ಮಾಡಿದ್ದಾರೆ ಈ ಬಾರಿ ಮತದಾರರ ಬದಲಾವಣೆ ಬಯಸಿದ್ದಾರೆ ಎಲ್ಲ ಕಡೆಗೂ ನಮಗೆ ಉತ್ತಮ ಸ್ಪಂದನೆ ಸಿಗುತ್ತಿದೆ ಈ ಬ್ಯಾಂಕನ್ನು ಇನ್ನಷ್ಟು ಅಭಿವೃದ್ಧಿಯಡೆಗೆ ತೆಗೆದುಕೊಂಡು ಹೋಗುಲು ನಾವು ಹಲವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಮತದಾರ ಬಾಂಧವರು ನಮಗೆ ಆಶೀರ್ವಾದ ಮಾಡಬೇಕು ಎಂದರು. ಈ ವೇಳೆ ಅಭ್ಯರ್ಥಿಗಳಾದ ಮಹದೇವಪ್ಪ ಕುಂಬಾರ, ಚನ್ನಬಸಪ್ಪ ಗೌಡ ಚೌಧರಿ, ಮಲ್ಕಾಜಪ್ಪ ನಾಗರಾಳ, ಬಸನಗೌಡ ಪಾಟೀಲ, ಮಯೂರ ಪಾಟೀಲ, ಪವಡೆಪ್ಪ ಯಾಳವಾರ, ಪ್ರಹ್ಲಾದಸಿಂಗ್ ಹಜೇರಿ, ದತ್ತು ರಾಥೋಡ, ಅಶೋಕ ಬಳಗಾನೂರ, ಸುಮಂಗಲಾ ಕಲಬುರ್ಗಿ, ಸಿದ್ದಮ್ಮ ಬಂದಾಳ, ಭೀಮಪ್ಪ ತಳವಾರ, ಘನಶಾಮ ಚವಾಣ ಹಾಗೂ ಅಪಾರ ಬೆಂಬಲಿಗರು ಇದ್ದರು.

# ಉತ್ತರ ಕರ್ನಾಟಕದವರು ಶ್ರಮಜೀವಿಗಳು: ಬಸವರಾಜ್ ಬೊಮ್ಮಾಯಿ



ಯಲಂಕ:ಉತ್ತರ ಕರ್ನಾಟಕದವರು ಶ್ರಮಜೀವಿಗಳು ನಮ್ಮತನ ಉಳಿಸಿಕೊಂಡು ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಗುಣ ಉತ್ತರ ಕರ್ನಾಟಕ ಜನದಲ್ಲಿ ಇದೆ. ಮಾಜಿ ಮುಖ್ಯಮಂತ್ರಿಗಳು ಬಸವರಾಜ್ ಬೊಮ್ಮಾಯಿ ಹೇಳಿದರು.. ಯಲಂಕದಲ್ಲಿ ನಡೆದ ಉತ್ತರ ಕರ್ನಾಟಕದ ಕ್ಷೇಮಾಭಿವೃದ್ಧಿ ಸಂಘದಿಂದ ಕಾರ್ಯಕ್ರಮದಲ್ಲಿ ಮಾತನಾಡಿದರು. ಉತ್ತರ ಕರ್ನಾಟಕದ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ವಜ್ಜಲ್ ಗ್ರಾಮದಿಂದ ಬೆಳೆದ ಡಿ ಎಕ್ಸ್ ಮ್ಯಾಕ್ಸ್ ಕಂಪನಿಯ ಮಾಲೀಕರಾದ ಡಾ. ಎಸ್ ಪಿ ದಯಾನಂದ ಅವರು ಭಾಗಿಯಾಗಿದ್ದರು..ಸಾಕಷ್ಟು ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಸ್ಕೃತಿ ಕಾರ್ಯಕ್ರಮ ನಡೆಸಿಕೊಟ್ಟರು ಯಲಹಂಕದ ಶಾಸಕ ವಿಶ್ವನಾಥ್ ಹಾಗೂ ಅನೇಕ ಗಣ್ಯರು ಭಾಗಿಯಾಗಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷರಾದ ಶಿವಶರಣಪ್ಪ ಸಾಹುಕಾರ ಮಾತನಾಡಿ ನಾವು ಉತ್ತರ ಕರ್ನಾಟಕದಿಂದ ಬಂದು ನಮ್ಮ ಸಂಸ್ಕೃತಿ ನಾ ಮರಿಬಾರ್ದು ಅನ್ನೋ ಉದ್ದೇಶದಿಂದ ಈ ಕಾರ್ಯಕ್ರಮವನ್ನು 17 ವರ್ಷದಿಂದ ಮಾಡ್ಕೊಂತ ಬರ್ತಾ ಇದೀವಿ.. ಎಂದು ಹೇಳಿದರು.. ಉತ್ತರ ಕರ್ನಾಟಕ ಸಂಘದ ಕಮುನಿಟಿ ಎಲ್ಲ ಸದಸ್ಯರು ಶಿವು ಮಡ್ನಾಳ ಶರಣು ಮಡ್ನಾಳ್ ಬಸವರಾಜ್ ಮಲ್ಲಿಕಾರ್ಜುನ್ ಮುಧೋಳ್ ಸಾಕಷ್ಟು ಉತ್ತರ ಕರ್ನಾಟಕ ಜನ ಕಾರ್ಯಕ್ರಮದಲ್ಲಿ ಭಾಗಿಯಾಗಿ. ದರು.

# 5 ವರ್ಷದ ಬಾಲಕಿಯ ಅತ್ಯಾಚಾರ ಆರೋಪಿಗೆ ಶಿಕ್ಷೆ ವಿಧಿಸಲು ಒತ್ತಾಯ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ತೋರಣಗಲ್ಲಿನಲ್ಲಿ 5 ವರ್ಷದ ಕಂದಮ್ಮನ ಮೇಲೆ ಅತ್ಯಾಚಾರಗೈದವನನ್ನು ಕೂಡಲೇ ಬಂಧಿಸಿ, ಅತ್ಯುಗ್ರ ಶಿಕ್ಷೆ ಖಾತ್ರಿಪಡಿಸಿ ಮಗುವಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಎಐಎಂಎಸ್ಎಸ್ ಆಗ್ರಹಿಸಿದೆ.

ಈ ಕುರಿತು ಇಂದು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿದ ಎಐಎಂಎಸ್ಎಸ್ ಜಿಲ್ಲಾಧ್ಯಕ್ಷೆ ಕೆ.ಎಂ. ಈಶ್ವರಿ ಅವರು, ಕಾರ್ಖಾನೆಯಲ್ಲಿ ಕೆಲಸಕ್ಕೆಂದು ಜಾರ್ಖಂಡದಿಂದ ತೋರಣಗಲ್ಲಿಗೆ ಬಂದು ನೆಲೆಸಿದ್ದ ದಂಪತಿಯ ಐದು ವರ್ಷದ ಕಂದಮ್ಮ ಮನೆಯ ಬಳಿ ಮಕ್ಕಳೊಂದಿಗೆ ಆಟವಾಡುತ್ತಿತ್ತು. ಈ ವೇಳೆ ಮಗುವನ್ನು ಪುಸಲಾಯಿಸಿ ಕರೆದೊಯ್ದಿರುವ ದುಷ್ಕರ್ಮಿ ಮಗುವಿನ ಮೇಲೆ ಅತ್ಯಾಚಾರ ಎಸಗಿದ್ದಾನೆ. ಲೈಂಗಿಕ ದೌರ್ಜನ್ಯದಿಂದಾಗಿ ಆಂತರಿಕ ಗಾಯಗಳಾಗಿದ್ದು ತೀವ್ರ ರಕ್ತಸ್ರಾವದಿಂದ ನಲುಗುತ್ತಿದ್ದ ಮಗುವನ್ನು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಅತ್ಯಾಚಾರ ನಡೆದಿರುವುದು ವೈದ್ಯಕೀಯ ಮೂಲಗಳಿಂದ ದೃಢಪಟ್ಟು, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿ ಎರಡು ದಿನಗಳಾದರೂ ಕೂಡ ಅತ್ಯಾಚಾರಿಯನ್ನು ಬಂಧಿಸಿಲ್ಲ. ಜಿಲ್ಲಾಡಳಿತ ಈ ಕೂಡಲೇ ಅತ್ಯಾಚಾರಿಯನ್ನು ಬಂಧಿಸಿ, ಅತ್ಯುಗ್ರ ಶಿಕ್ಷೆಯನ್ನು ಖಾತ್ರಿಪಡಿಸಿ, ಮಗುವಿಗೆ ನ್ಯಾಯ ದೊರಕಿಸಿಕೊಡಬೇಕು ಹಾಗೂ ಮಗುವಿನ ಭವಿಷ್ಯದ ಎಲ್ಲಾ ಜವಾಬ್ದಾರಿಗಳನ್ನು ಸರ್ಕಾರವೇ ಹೊತ್ತುಕೊಳ್ಳಬೇಕು" ಎಂದು ಆಗ್ರಹಿಸಿದರು.

ಪ್ರತಿಭಟನೆಯ ಅಧ್ಯಕ್ಷತೆ ವಹಿಸಿದ್ದ ಎಐಎಂಎಸ್ಎಸ್ ನ ಜಿಲ್ಲಾ ಕಾರ್ಯದರ್ಶಿ ವಿಜಯಲಕ್ಷ್ಮಿ "ಬೆಂಗಳೂರಿನಲ್ಲಿಯೂ ಕೂಡ ಐದು ವರ್ಷದ ಕಂದಮ್ಮನ ಮೇಲೆ ಅತ್ಯಾಚಾರ ವರದಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ಅವ್ಯಾಹತವಾಗಿ ನಡೆಯುತ್ತಿವೆ. ಸಾಮಾಜಿಕ ಮಾಧ್ಯಮ, ಇಂಟರ್ನೆಟ್, ಟಿವಿಗಳ ಮೂಲಕ ಹರಿದಾಡುತ್ತಿರುವ ಅಶ್ಲೀಲ ಸಿನಿಮಾ-ಸಾಹಿತ್ಯ ಮತ್ತು ಮದ್ಯ ಮಾದಕ ವಸ್ತುಗಳು ಇಂತಹ ಅಪರಾಧಗಳಿಗೆ ಕಾರಣವಾಗುತ್ತಿವೆ. ಇನ್ನೊಂದೆಡೆ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಈ ಸಾಂಸ್ಕೃತಿಕ ಅಧಪತನದಿಂದಾಗಿ ವಿದ್ಯಾರ್ಥಿ-ಯುವಜನರು ಇಂತಹ ಹೀನ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ಪ್ರಪಂಚವರಿಯದ ಪುಟ್ಟ ಕಂದಮ್ಮನ ಮೇಲೂ ಕ್ರೌರ್ಯ ಎಸಗುವ ಪಶುತ್ವದ ಮಟ್ಟಕ್ಕೆ ತಲುಪುತ್ತಿದ್ದಾರೆ. ಈ ಎಲ್ಲದಕ್ಕೂ ನೈತಿಕ ಜವಾಬ್ದಾರರಾಗಿರುವ ಸರ್ಕಾರಗಳು ಮಹಿಳೆಯರು ಮತ್ತು ಮಕ್ಕಳಿಗೆ ಸುರಕ್ಷಿತ ವಾತಾವರಣವನ್ನು ಕಲ್ಪಿಸಬೇಕು, ಅಶ್ಲೀಲ ಸಿನಿಮಾ-ಸಾಹಿತ್ಯಗಳನ್ನು ನಿಷೇಧಿಸಬೇಕು, ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ಖಾತ್ರಿಪಡಿಸಿ ಮತ್ತೆ ಇಂತಹ ಅಪರಾಧಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು" ಎಂದು ಹೇಳಿದರು.

ಪದಾಧಿಕಾರಿಗಳಾದ ಪದ್ಮಾ, ವಿದ್ಯಾ, ಗಿರಿಜಾ, ಸೌಮ್ಯ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿನಿಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16-ಕಲಬುರಗಿ ವಿಭಾಗದ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲೆಯಲ್ಲಿ 6 ತಿಂಗಳ ಅವಧಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಜನವರಿ 31 ರವರೆಗೆ ವಿಸ್ತರಿಸಲಾಗಿದೆ ಎಂದು ಕಲಬುರಗಿ ಗ್ರಂಥಾಲಯ ತರಬೇತಿ ಶಾಲೆಯ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ತಿಳಿಸಿದ್ದಾರೆ.

# ಬಸವಣ್ಣನ ಮೂರ್ತಿಗೆ ಅವಮಾನ; ರಸ್ತೆ ತಡೆದು ಪ್ರತಿಭಟನೆ



ಮಲ್ಲಮ ನುಡಿ ವಾರ್ತೆ
ಬೀದರ. ಜ. 15 : ಬಸವಣ್ಣ ಪ್ರತಿಮೆಯ ಕೈ ಮುರಿದ ಘಟನೆ ಭಾಲ್ಕಿ ತಾಲ್ಲೂಕಿನ ದಾಡಗಿ ಕ್ರಾಸ್ ಬಳಿ ನಡೆದಿದ್ದು, ಕೃತ್ಯದ ವಿರುದ್ಧ ಆಕ್ರೋಶಗೊಂಡ ಬಸವ ಅನುಯಾಯಿಗಳು ರಸ್ತೆ ತಡೆದು ಪ್ರತಿಭಟನೆ ನಡೆಸುತ್ತಿದ್ದಾರೆ.

ಮಂಗಳವಾರ ತಡ ರಾತ್ರಿಯ ಸಮಯದಲ್ಲಿ ಕಿಡಿಗೇಡಿಗಳು ಬಸವಣ್ಣನ ಪ್ರತಿಮೆಯ ಕೈ ಮುರಿದಿದ್ದಾರೆ ಎನ್ನಲಾಗಿದೆ.

ಇದರ ವಿರುದ್ಧ ದಾಡಗಿ ಗ್ರಾಮದ ಬಸವ ಅನುಯಾಯಿಗಳು ಭಾಲ್ಕಿ–ಹುಮನಾಬಾದ್–ಬಸವಕಲ್ಯಾಣ ಮೂರು ತಾಲ್ಲೂಕುಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಮೇಲೆ ಬೆಂಕಿ ಹಾಕಿ ಪ್ರತಿಭಟನೆ ನಡೆಸುತ್ತಿದ್ದಾರೆ.

ರಸ್ತೆಯ ಮಧ್ಯದಲ್ಲಿ ಕುಳಿತು ಪ್ರತಿಭಟನೆ ಮುಂದುವರೆಸಿದ ಬಸವ ಅನುಯಾಯಿಗಳು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ತಕ್ಷಣವೇ ಬರಬೇಕು ಎಂದು ಆಗ್ರಹಿಸುತ್ತಿದ್ದಾರೆ.

ಬಸವಣ್ಣನ ಪ್ರತಿಮೆಗೆ ಅವಮಾನ ಮಾಡಿದ ಕಿಡಿಗೇಡಿಗಳನ್ನು ತಕ್ಷಣವೇ ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಭಿಕ್ಷಾಟನೆ ಮುಕ್ತ ಜಾತ್ರೆಗಾಗಿ ಅನಿರೀಕ್ಷಿತ ದಾಳಿ

ಮಲ್ಲಮ್ಮ ನುಡಿ ವಾರ್ತೆ
ಕೊಪ್ಪಳ:ಜ.15:ಶ್ರೀಗವಿಸಿದ್ದೇಶ್ವರ ಜಾತ್ರಾ ನಿಮಿತ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸ್ಪಂದನಾ, ಮಹಿಳಾ ಧ್ವನಿ ಶಿಕ್ಷಣ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆ, ಕೊಪ್ಪಳ ಹಾಗೂ ಭಿಕ್ಷುಕರ ಪುನರವಸತಿ ಕೇಂದ್ರ, ಬಳ್ಳಾರಿರವರ ಸಂಯುಕ್ತಾಶ್ರಯದಲ್ಲಿ ಭಿಕ್ಷಾಟನೆ ಮುಕ್ತ ಶ್ರೀಗವಿಸಿದ್ದೇಶ್ವರ ಜಾತ್ರೆಯನ್ನಾಗಿಸಲು ಭಿಕ್ಷುಕರ ಪತ್ತೆ ಮತ್ತು ಪುನರವಸತಿಗಾಗಿ ಬುಧವಾರದಂದು ಅನಿರೀಕ್ಷಿತ ದಾಳಿಯನ್ನು ಆಯೋಜಿಸಲಾಯಿತು.

ಈ ಚಟುವಟಿಕೆಗೆ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಲಾದ ಮಹಾಂತೇಶ ದರಗದ ಅವರು ವಾಹನಕ್ಕೆ ಹಸಿರು ನಿಶಾನೆಯನ್ನು ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.



ನಂತರ ನಡೆಸಿದ ಅನಿರೀಕ್ಷಿತ ದಾಳಿಯಲ್ಲಿ 12 ಜನ ಭಿಕ್ಷುಕರನ್ನು ಪತ್ತೆ ಹಚ್ಚಿ ವಶಕ್ಕೆ ಪಡೆಯಲಾಯಿತು. ಈ ದಾಳಿಯಲ್ಲಿ ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಮಹಿಳಾ ಧ್ವನಿ ಶಿಕ್ಷಣ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷೆ ಪ್ರೀಯದರ್ಶಿನಿ ಮುಂಡರಗಿ ಮಠ, ಸ್ಪಂದನಾ ಸಂಸ್ಥೆಯ ಸಂಯೋಜಕ ಶಂಕರ ಸುರಳ, ಬಳ್ಳಾರಿಯ ಭಿಕ್ಷಕುರ ಪುನರವಸತಿ ಕೇಂದ್ರದ ಅಧೀಕ್ಷಕ ಕೆ.ಪಿ. ಚಿನಪಾಲಯ್ಯ, ವಾರ್ಡರ ಜೆ.ಮಣಿಕಂಠ ಸೇರಿದಂತೆ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098 ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂಧಿಗಳು ಭಾಗವಹಿಸಿದ್ದರು.

ಬುಧವಾರ ಮಧ್ಯಾಹ್ನದವರೆಗೆ ಕಾರ್ಯಾಚರಣೆಯಲ್ಲಿ 12 ಜನರನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದು, ಅವರಿಗೆ ಪುನರವಸತಿಯನ್ನು ಕಲ್ಪಿಸಲಾಗುತ್ತದೆ. ಭಿಕ್ಷಾಟನೆ ಮಾಡುವುದು ಹಾಗೂ ಭಿಕ್ಷಾಟನೆಯಲ್ಲಿ ಮಕ್ಕಳನ್ನು ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಆದ್ದರಿಂದ ಯಾವುದೇ ವ್ಯಕ್ತಿ/ಮಗುವಿಗೆ ಭಿಕ್ಷೆಯ ರೂಪದಲ್ಲಿ ಹಣ ಅಥವಾ ವಸ್ತುಗಳನ್ನು ನೀಡದಂತೆ ಹಾಗೂ ಭಿಕ್ಷಾಟನೆ ನಿರ್ಮೂಲನೆಯಲ್ಲಿ ಕೊಪ್ಪಳ ಜಿಲ್ಲಾಡಳಿತದೊಂದಿಗೆ ಕೈ ಜೋಡಿಸುವಂತೆ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ತಿಳಿಸಿದೆ.

# ಪಶು ವಿ.ವಿಗೆ ಗ್ರಂಥಾಲಯ ಕಟ್ಟಡವೇ ಆಸರೆ

ಮಲ್ಲಮ ನುಡಿ ವಾರ್ತೆ
ಬೀದರ. ಜ. 15 : ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಗೊಂಡು 20 ವರ್ಷ ಕಳೆದಿವೆ. ಆದರೆ, ಈಗಲೂ ಇದು ಎಲ್ಲ ಚಟುವಟಿಕೆಗಳಿಗೂ ಗ್ರಂಥಾಲಯ ಕಟ್ಟಡವನ್ನೇ ಅವಲಂಬಿಸಿದೆ.




ಸರ್ಕಾರ ಈ ಭಾಗದಲ್ಲಿ 1984ರಲ್ಲಿ ಪಶು ವೈದ್ಯಕೀಯ ಕಾಲೇಜು ಆರಂಭಿಸಿತು.

ನಂಜುಂಡಪ್ಪ ವರದಿ ಆಧರಿಸಿ 2005ರ ಜನವರಿ 17ರಂದು ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಲಾಯಿತು. ಕಾಲೇಜು ಸಂದರ್ಭದಲ್ಲಿ ನಿರ್ಮಿಸಿದ ಗ್ರಂಥಾಲಯವನ್ನು ತಾತ್ಕಾಲಿಕವಾಗಿ ಆಡಳಿತ ಭವನವಾಗಿ ಬದಲಿಸಲಾಯಿತು. 20 ವರ್ಷ ಕಳೆಯುತ್ತ ಬಂದರೂ ಈಗಲೂ ಅದೇ ಕಟ್ಟಡದಲ್ಲಿ ವಿ.ವಿ. ಕುಲಪತಿ, ಕುಲಸಚಿವರು, ಹಣಕಾಸು ಅಧಿಕಾರಿಗಳು ಹಾಗೂ ಡೀನ್‌ಗಳ ಕಚೇರಿಗಳು ಕೆಲಸ ನಿರ್ವಹಿಸುತ್ತಿವೆ.

ರಾಜ್ಯದ 7 ಪಶು ವೈದ್ಯಕೀಯ ಕಾಲೇಜುಗಳು, 2 ಹೈನುಗಾರಿಕೆ ಕಾಲೇಜು, 1 ಮೀನುಗಾರಿಕೆ ಕಾಲೇಜು, 10 ಸಂಶೋಧನಾ ವಲಯಗಳು ಹಾಗೂ 5 ಡಿಪ್ಲೊಮಾ ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುತ್ತವೆ.

ಜಾನುವಾರು ತಳಿ ಅಭಿವೃದ್ಧಿ, ಲಸಿಕೆ ಸೇರಿ ಹೊಸ ಸಂಶೋಧನೆಗಳು ನಡೆಯುತ್ತಿರುತ್ತಿವೆ. ಕಾರ್ಯಭಾರ ಹೆಚ್ಚಾಗಿದೆ. ಹೀಗಿದ್ದರೂ ಕೆಲಸ ನಿರ್ವಹಿಸಲು ಕುಲಪತಿ ಸೇರಿದಂತೆ ಇತರೆ ಅಧಿಕಾರಿಗಳಿಗೆ ಉತ್ತಮ ಕಟ್ಟಡದ ವ್ಯವಸ್ಥೆಯಿಲ್ಲ.

180 ಎಕರೆ ಪ್ರದೇಶದಲ್ಲಿ ಹರಡಿರುವ ವಿಶ್ವವಿದ್ಯಾಲಯದ ಆವರಣದಲ್ಲಿ ಉತ್ತಮ ಅತಿಥಿ ಗೃಹ, ಸಿಬ್ಬಂದಿ ವಸತಿಗೃಹ, ಸಿ.ಸಿ ರಸ್ತೆಗಳಿಲ್ಲ. ಕ್ರೀಡಾಂಗಣವಿದೆ. ಅಲ್ಲಿ ಸೂಕ್ತ ವ್ಯವಸ್ಥೆ ಇಲ್ಲ. 'ಇಲ್ಲ'ಗಳ ನಡುವೆಯೇ ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆ ಇದೆ.

**ಶೇ 70ರಷ್ಟು ಹುದ್ದೆ ಖಾಲಿ:**

ಇದರ ಜೊತೆಗೆ ಸಿಬ್ಬಂದಿ ಕೊರತೆಯೂ ಪಶು ವೈದ್ಯಕೀಯ ವಿಶ್ವವಿದ್ಯಾಲಯವನ್ನು ಕಾಡುತ್ತಿದೆ. ವಿ.ವಿ. ವ್ಯಾಪ್ತಿಯ ಸಂಸ್ಥೆಗಳಿಗೆ ಒಟ್ಟು 794 ಬೋಧಕ ಹುದ್ದೆಗಳು ಮಂಜೂರಾಗಿದೆ. ಆದರೆ, 264 ಹುದ್ದೆಗಳಷ್ಟೇ ಭರ್ತಿ ಆಗಿವೆ. 1,577 ಬೋಧ–ಕೇತರ ಹುದ್ದೆಗಳಲ್ಲಿ 225 ನೇಮಕಾತಿಯಾಗಿದ್ದು, 1,352 ಹುದ್ದೆ ಖಾಲಿ ಉಳಿದಿವೆ.

'ವಿ.ವಿ ಆಡಳಿತ ಮಂಡಳಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತಲೇ ಇದೆ. ಆದರೆ, ಸರ್ಕಾರ ಕಿವಿಗೊಟ್ಟಿಲ್ಲ. ಗ್ಯಾರಂಟಿ ಯೋಜನೆಗಳ ಜಾರಿ ಬಳಿಕ ಅನುದಾನದ ಕಡತ ಮೂಲೆ ಸೇರಿದೆ' ಎಂದು ವಿ.ವಿ. ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

**ಸರ್ಕಾರಕ್ಕೆ ಪ್ರಸ್ತಾವ'**

'20 ವರ್ಷಗಳಿಂದ ಗ್ರಂಥಾಲಯ ಕಟ್ಟಡದಲ್ಲೇ ಆಡಳಿತಾತ್ಮಕ ಚಟುವಟಿಕೆ ನಡೆಸಿಕೊಂಡು ಬರುತ್ತಿದ್ದೇವೆ. ಪ್ರತ್ಯೇಕ ಆಡಳಿತಾತ್ಮಕ ಕಟ್ಟಡದ ಅಗತ್ಯವಿದೆ. ಸರ್ಕಾರ ಅಥವಾ ಕೆಕೆಆರ್‌ಡಿಬಿ ಮೂಲಕ ಅನುದಾನ ಒದಗಿಸಬೇಕು ಎಂದು ಪ್ರಸ್ತಾವ ಸಲ್ಲಿಸಿದ್ದೇವೆ. ಮೇಲಿಂದ ಮೇಲೆ ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆಯುತ್ತಿರುತ್ತವೆ. ಅದಕ್ಕಾಗಿ ಅತಿಥಿಗೃಹ ಮೂಲಸೌಕರ್ಯ ಹೆಚ್ಚಿಸಲು ಅನುದಾನದ ಅಗತ್ಯವಿದೆ' ಎಂದು ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಸಿ. ವೀರಣ್ಣ ಪ್ರತಿಕ್ರಿಯಿಸಿದ್ದಾರೆ

# ಅಮಿತ ಶಾ ಹೇಳಿಕೆ ಖಂಡಿಸಿ ಜ.20 ಬಾಗಲಕೋಟೆ ಬಂದ್

ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ,15:ಡಾ.ಬಾಬಾಸಾಹೇಬ ಅಂಬೇಡ್ಕರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆ ಖಂಡಿಸಿ ದಲಿತ ಹಿಂದುಳಿದ ಅಲ್ಪಸಂಖ್ಯಾತ ಕಾರ್ಮಿಕ ಪ್ರಗತಿಪರ ರೈತ ಹಾಗೂ ಮಹಿಳಾ ಸಂಘಟನೆಗಳ ಒಕ್ಕೂಟ ಜ.20 ರಂದು ಬಾಗಲಕೋಟೆ ಬಂದ್‌ಗೆ ಕರೆ ನೀಡಿದೆ. ಒಕ್ಕೂಟದ ಮುಖಂಡ ಪರಶುರಾಮ ಮಹಾರಾಜನವರ ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈ ವಿಷಯ ತಿಳಿಸಿದರು. ವಿಶ್ವದ ಕೋಟ್ಯಾಂತರ ಜನರ ಬದುಕಿಗೆ ಬೆಳಕು ನೀಡಿದ ಬಾಬಾಸಾಹೇಬ ಅಂಬೇಡ್ಕರ ಅವರ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಆಘಾತಕಾರಿ. ನಮಗೆ ದೇವರು ಎಂದು ಇರುವುದೇ ಅಂಬೇಡ್ಕರ, ಯಾರೋ ಪೂಜಿಸುವ ದೇವರನ್ನು ನಾವು ಒಪ್ಪಲು ಸಾಧ್ಯವಿಲ್ಲ ಎಂದರು. ಬಾಗಲಕೋಟೆ ನಗರದ ಎಲ್ಲ ಗಣ್ಯ ವ್ಯಾಪಾರಸ್ಥರು, ಸಂಘ ಸಂಸ್ಥೆಗಳು, ಬೀದಿಬದಿ ವ್ಯಾಪಾರಸ್ಥರು, ಸಾರ್ವಜನಿಕರು ಬಂದ್‌ಗೆ ಸ್ವಯಂ ಪ್ರೇರಿತರಾಗಿ ಬೆಂಬಲ ನೀಡಿ ಬಂದ್ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿಕೊಂಡಿರುವ ಮಹಾರಾಜನವರ, ಅಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಬಾಗಲಕೋಟೆ ನಗರ, ನವನಗರ, ವಿದ್ಯಾಗಿರಿ ಭಾಗದಲ್ಲಿ ಎಲ್ಲ ವ್ಯಾಪರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಬೆಂಬಲಿಸಬೇಕು ಎಂದು ಹೇಳಿದರು. ಬೆಳಿಗ್ಗೆ ಬಾಗಲಕೋಟೆ ನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ ಪುತ್ಥಳಿಗೆ ಮಾರ್ಲಾಪಣೆ ಮಾಡುವ ಮೂಲಕ ಅಲ್ಲಿಂದ ಬೃಹತ್ ರ್‍ಯಾಲಿ ವಲ್ಲಭಬಾಯಿ ಚೌಕ, ಟಾಂಗಾ ಸ್ಟ್ಯಾಂಡ್, ಎಂ.ಜಿ.ರೋಡ, ಬಸವೇಶ್ವರ ವೃತ್ತದ ಮೂಲಕ ಹೊಳೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಸಭೆಯಾಗಿ ಮಾರ್ಪಡಲಿದೆ ಎಂದು ತಿಳಿಸಿದರು.



ಗಡಿಪಾರು ಆಗಿದ್ದ ವ್ಯಕ್ತಿ ದೇಶದ ಗೃಹಮಂತ್ರಿ ಆಗಿರುವುದು ನಮ್ಮ ದುರಂತ. ಹಾಗಾಗಿ ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ.

# ನಿಧನ



**ಡಾ.ವೀರಪ್ಪ ಅಡಿವೆಪ್ಪ ಪೂಜಾರಿ (78)**
ಇಸ್ಲಾಂಪೂರ, ತಾ.ಬಸವಕಲ್ಯಾಣ, ಜಿ.ಬೀದರ್.

**ಇವರು ದಿನಾಂಕ 15–1–2025 ಬುಧವಾರ ರಾತ್ರಿ ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆ ದಿನಾಂಕ 16–1–2025 ಮಧ್ಯಾನ 2 ಗಂಟೆಗೆ ಇಸ್ಲಾಂಪೂರ ಗ್ರಾಮದ ಅವರ ಸ್ವಂತ ತೋಟದಲ್ಲಿ ನೆರವೇರಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.**

–; ದುಃಖ ತಪ್ತರು :–

**ಧರ್ಮ ಪತ್ನಿ:** ಶ್ರೀಮತಿ ಕೃಷ್ಣವೇಣಿ ದಿ. ಡಾ.ವೀರಪ್ಪ ಪೂಜಾರಿ
**ಮಕ್ಕಳಾದ:** ಡಾ.ರವಿ ಪೂಜಾರಿ, ಶ್ರೀಮತಿ ಕರುಣಾ ಪ್ರಸನ್ನ, ಶ್ರೀಮತಿ ಅರುಣಾ ಓಂಪ್ರಕಾಶ

**ಸಮಸ್ತ ಪೂಜಾರಿ ಬಂಧು ಮಿತ್ರರು**

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕೊಪ್ಪಳ

## ತಾಲೂಕ ಪಂಚಾಯತ ಕೊಪ್ಪಳ

### ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

**2024-25 ನೇ ಸಾಲಿನ ಪ್ರಗತಿ ವರದಿ**

- ಮಾನವ ದಿನಗಳ ಸೃಜನೆಯ ವಾರ್ಷಿಕ ಗುರಿ **15.25 ಲಕ್ಷ**, ಅನುದಾನ ರೂ.**9402.64** ಲಕ್ಷಗಳ ನಿಗದಿ.
- ಯೋಜನೆಯಡಿ ಒಟ್ಟು **73877** ಕುಟುಂಬಗಳಿಗೆ ಜಾಬಕಾರ್ಡ ವಿತರಣೆ ಮಾಡಲಾಗಿರುತ್ತದೆ.
- ಡಿಸೆಂಬರ್-2024 ರ ಮಾಹೆಯ ಅಂತ್ಯಕ್ಕೆ ಒಟ್ಟು ಮಾನವ ದಿನಗಳ ಸೃಜನೆಯ ಗುರಿ **12.39 ಲಕ್ಷ ಸಾಧನೆ 10.99 ಲಕ್ಷ ಶೇ 85%,** ಮಹಿಳಾ ಭಾಗವಹಿಸುವಿಕೆ **54.56%**
- ಕೂಲಿ, ಸಾಮಾಗ್ರಿ ಒಟ್ಟು ರೂ.**3863.25** ಲಕ್ಷಗಳ ಅನುದಾನ ಖರ್ಚು ಭರಿಸಲಾಗಿದೆ. (ಗ್ರಾ.ಪಂ & ಅನುಷ್ಠಾನ ಇಲಾಖೆ)
- ಕೂಲಿ ಒಂದು ದಿನಕ್ಕೆ ರೂ.**349/-**
- ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ :**1877**
- ಕೆರೆ, ಚೆಕ್ ಡ್ಯಾಂ ನಾಲಾ ಹೂಳೆತ್ತುವುದು, ವೈಯಕ್ತಿಕ ಬಚ್ಚಲು ಗುಂಡಿ, ಬದು ನಿರ್ಮಾಣ, ಕೃಷಿಹೊಂಡ, ದನದದೊಡ್ಡಿ, ಮೇಕೆ ಶೆಡ್ ನಿರ್ಮಾಣ ಮತ್ತು ಶಾಲಾಭಿವೃದ್ಧಿ ಕಾಮಗಾರಿಗಳು, ಹಿಪ್ಪು ನೇರಳೆ ಮತ್ತು ತೋಟಗಾರಿಕೆ ಬೆಳೆ ಅನುಷ್ಠಾನಗೊಳಿಸಲು ಆದ್ಯತೆ ನೀಡಲಾಗಿದೆ.
- **ಬೆಟಗೇರಿ ಗ್ರಾ.ಪಂಯ ಮೊರನಾಳ** ಗ್ರಾಮ ಹಾಗು **ಲೇಬಗೇರಿ ಗ್ರಾ.ಪಂಯ ಕಾಮನೂರು** ಗ್ರಾಮಗಳನ್ನು ನರೇಗಾದಡಿ ದತ್ತು ತೆಗೆದುಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
- ಪ್ರತಿ ಮಾನವ ದಿನಕ್ಕೆ ಮಹಿಳಾ ಕಾಯಕ ಬಂಧುವಿಗೆ ರೂ.5/-ಹಾಗೂ ಪುರುಷ ಕಾಯಕ ಬಂಧುಗಳಿಗೆ ರೂ.4/- ಬ್ಯಾಂಕ್ ಖಾತೆಗೆ Ne-FMS ಮೂಲಕ ಪಾವತಿಗೆ ಅವಕಾಶವಿರುತ್ತದೆ.
- ತಾಲೂಕಿನ 35 ಗ್ರಾಮ ಪಂಚಾಯತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಶೇ.50%ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.



**ಶ್ರೀ ಯಂಕಪ್ಪ**
ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ತಾಲೂಕ ಪಂಚಾಯತ ಕೊಪ್ಪಳ



**ಶ್ರೀ ದುಂಡಪ್ಪ ತುರಾದಿ**
ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಕೊಪ್ಪಳ



**ಶ್ರೀ ಪ್ರಕಾಶ ವಡ್ಡರ**
ಯೋಜನಾ ನಿರ್ದೇಶಕರು ಜಿ.ಪಂ ಹಾಗೂ ಆಡಳಿತಾಧಿಕಾರಿಗಳು ತಾ. ಪಂ ಕೊಪ್ಪಳ

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 411B & 42, Kapoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.